
## ಉಚಿತ ಪ್ರತಿಗಳಿಗಾಗಿ ಮತ್ತು
## ಉಚಿತ ಪತ್ರಿಕೆಗಳಿಗಾಗಿ
## ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ




ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.


ನಮ್ಮ ವಿಳಾಸ:

**ದ ಕ್ರಿಸ್ಟಡೆಲ್ಫಿಯನ್ಸ್**

ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್,

ಬೆಂಗಳೂರು - 560 005


# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು


**ಸಂಚಿಕೆ 8**




- ಸಮುದ್ರ ಪ್ರಯಾಣ
- ಯೇಸುಕ್ರಿಸ್ತನನ್ನು ಕುರಿತ ಹಳೆಯ ಒಡಂಬಡಿಕೆಯ ಪ್ರವಾದನೆಗಳು
- ಯೇಸು ಮೆಸ್ಸೀಯನಾಗಿದ್ದಾನೆ
- ಯೇಸು :- ದೇವಕುಮಾರ ಮತ್ತು ಮನುಷ್ಯಕುಮಾರ
- ಯೇಸುವಿನೊಟ್ಟಿಗೆ ದೇವರ ಸಂಬಂಧ

## ಕ್ರಿಸ್ಟಡೆಲ್ಫಿಯನ್ನರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.


**Co-ordinator : Linus Daniel**

**e-mail : info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.



**ನೂತನ ಸೃಷ್ಟಿ ಪತ್ರಿಕೆಯ ತಂಡ**

**ಲೀನಸ್ ಡ್ಯಾನಿಯಲ್** : ಸಂಯೋಜಕರು

**ಚೈತ್ರ ಸ್ವರೂಪ** : ಕಾರ್ಯ ನಿರ್ವಹಣೆ, ಪುನರವಲೋಕನ ಮತ್ತು ಡಿ.ಟಿ.ಪಿ ಸಂಯೋಜಕರು.

**ಸುಧೀರ್ ಬಿ.ಜಿ** : ಭಾಷಾಂತರ


ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.
ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.


*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ಸಮುದ್ರ ಪ್ರಯಾಣ

## ಎಲ್ಲೆಲ್ಲೂ ನೀರು

ಭೂಮಿಯ ಶೇಕಡ ಎಪ್ಪತ್ತಕ್ಕಿಂತಲೂ ಅಧಿಕ ಭಾಗವು ನೀರಿನಿಂದ(ಸಾಗರ, ಸಮುದ್ರ, ಸರೋವರ ಇತ್ಯಾದಿ.,)ಆವೃತ್ತವಾಗಿದೆ. ಆದುದರಿಂದ ಮಾನವನು ಪುರಾತನ ಕಾಲದಿಂದಲೂ ಸಮುದ್ರವನ್ನು ಮತ್ತು ನದಿಗಳನ್ನು ತನ್ನ ಸಂಚಾರಮಾರ್ಗವಾಗಿ(ಪ್ರಯಾಣ ಮತ್ತು ಸರಕುಸಾಗಣೆ) ಉಪಯೋಗಿಸಿಕೊಳ್ಳುತ್ತಿದ್ದಾನೆ. ಆದರೆ ಹಿಂದಿನ ಕಾಲದ ಜಲಪ್ರಯಾಣವು ಶಾಂತಿಯಿಂದ ಕೂಡಿದ ಮತ್ತು ಅತಿ ಸುರಕ್ಷಿತ ಪ್ರಯಾಣವೇನಲ್ಲ. ಸಮುದ್ರ ಪ್ರಯಾಣಮಾಡುವ ಸಂದರ್ಭದಲ್ಲಿ ಕಡಲುಗಳ್ಳರ ಆಕ್ರಮಣಕ್ಕೆ ಹಡುಗು ತುತ್ತಾಗುತ್ತಿತ್ತು, ಅಥವಾ ಅತಿಹೆಚ್ಚಿನ ಸರಕಿನ ಭಾರದಿಂದ ಮುಳುಗಿಹೋಗುವ ಸಂಭವಗಳಿದ್ದವು, ಅದೇರೀತಿ ವಿಪರೀತವಾದ ವಾತಾವರಣದ ಸುಳಿಗೆ ಸಿಲುಕಿ ಹಡಗು ನಾಶವಾಗುತ್ತಿದ್ದವು, ಏಕಂದರೆ ಅಂದು ಹಡಗಿನ ತಂತಜ್ಞಾನ ಈಗಿನಷ್ಟು ಮುಂದುವರೆದಿರಲಿಲ್ಲ.



ಆದರೆ ಇತ್ತೀಚಿನ ದಿನಗಳಲ್ಲಿ ಸಾಗರಗಳನ್ನು ಅಧಿಕವಾದ ಸರಕುಗಳನ್ನು ದೂರದೂರಕ್ಕೆ ಸಾಗಿಸಲು ಅತಿಹೆಚ್ಚಾಗಿ ಬಳಸಿಕೊಳ್ಳುತ್ತಿದ್ದಾರೆ. ಸರಕುಗಳು ಒಂದು ದೇಶದಲ್ಲಿ ತಯಾರಾದರೆ, ದೂರದ ಮತ್ತೊಂದು ದೇಶದಲ್ಲಿ ಅವುಗಳ ಮಾರಾಟ ನಡೆಸಲಾಗುತ್ತದೆ.

– ಸಮುದ್ರದಲ್ಲಿ ಹೆಚ್ಚಾಗಿ ಕಚ್ಚಾವಸ್ತುಗಳನ್ನು ಮತ್ತು ಇತರೆ ಬಳಕೆಯ ಸರಕುಗಳನ್ನು ಸಾಗಿಸಲಾಗುತ್ತದೆ.

– ಅದೇರೀತಿ ಸಾಗರಗಳಲ್ಲಿ ಪ್ರಯಾಣಿಕರನ್ನು ಸಹ ಒಂದುಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲಾಗುತ್ತದೆ.


– ಸಣ್ಣಸಣ್ಣ ಹಡಗುಗಳನ್ನು ರಕ್ಷಣಾ ಕಾರ್ಯಗಳಿಗೆ, ನಿರಾಶ್ರಿತರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಬಳಸುತ್ತಾರೆ ಮತ್ತು,

– ಅದೇರೀತಿ ಕೆಲವು ದೊಡ್ಡ ಹಡಗುಗಳನ್ನು ಮನೋರಂಜನಾ ಕೇಂದ್ರವಾಗಿ ಪರಿವರ್ತಿಸಿ ಎಲ್ಲಾ ಸೌಲಭ್ಯಗಳನ್ನೂ ಹಡಗಿನಲ್ಲೇ ದೊರೆಯುವಂತೆ ಮಾಡಿ, ಸಮುದ್ರದ ಮಧ್ಯದಲ್ಲಿ ನಿಲ್ಲಿಸಿ ಜನರು ಸಮುದ್ರದ ಸೌಂದರ್ಯವನ್ನು ಸವಿಯಲು ಅನುವು ಮಾಡಿಕೊಟ್ಟಿರುತ್ತಾರೆ.

## ಅಪಾಯಕಾರಿಯಾದ ನೀರು :

ಇಂಗ್ಲೆಂಡ್ ನ ದಕ್ಷಿಣ ತೀರದಲ್ಲಿರುವ ಸಿಡ್ ಮೌತ್ ಸಮುದ್ರ ತೀರದಲ್ಲಿ ನೀವು ಕುಳಿತಿದ್ದರೆ,

ಇಂಗ್ಲಿಷ್ ಕಡಲ್ಗಾಲುವೆ ಕಾಣುತ್ತದೆ. ಇದು ಪ್ರಪಂಚದಲ್ಲೇ ಅತಿಹೆಚ್ಚು ಸಮುದ್ರ0ಯಾನದ ದಟ್ಟಣೆಯಿಂದ ಕೂಡಿರುವಂತಹುದಾಗಿದೆ. ಇಲ್ಲಿ ಎಲ್ಲಾರೀತಿ0ಯ ಸಮುದ್ರ ಸಾಗಾಣಿಕೆ0ಯ ಚಟುವಟಿಕೆಗಳನ್ನು ನೋಡಬಹುದು; ಇಲ್ಲಿ ಸಣ್ಣಸಣ್ಣ ಹಡಗುಗಳು ಮೀನುಗಾರಿಕೆ ನಡೆಸುತ್ತಿರುವುದನ್ನು ಕಾಣಬಹುದು, ದೊಡ್ಡಹಡಗುಗಳು ಬಂದರಿನ ಹಡಗುಕಟ್ಟೆಗೆ ಬರುವುದನ್ನು ನೋಡಬಹುದು, ಈ ಸಮುದ್ರದಲ್ಲಿ ಮನೋರಂಜನೆಗಾಗಿ ಹಡಗುಗಳನ್ನು ಆಟಕ್ಕೆ ಉಪ0ಯೋಗಿಸಿ ಸಂತೋಷಿಸಿತ್ತಿರುವವರನ್ನು ಕಾಣಬಹುದು. ಈ ಹಡಗಿನ ಗಾತ್ರಗಳು 0ಯಾವ ರೀತಿ0ಯದೇ ಆಗಿರಲಿ, ಅವುಗಳನ್ನು ಸಮುದ್ರದಲ್ಲಿ ಉಪ0ಯೋಗಿಸುವಾಗ ಆ ಕೆಲಸ 0ಯಾವಾಗಲೂ ಅತ್ಯಂತ ಕಠಿಣ ಮತ್ತು ಅಪಾ0ಯಕಾರಿ0ಯಾಗಿರುತ್ತದೆ.



ಇತ್ತೀಚಿನ ದಿನಗಳಲ್ಲಿ ವಿಜ್ಞಾನ ಬಹಳಷ್ಟು ಮುಂದುವರೆದಿದ್ದು, ಹಡಗುಗಳಿಗೆ ಅತ್ಯಾಧುನಿಕ ಉಪಕರಣಗಳನ್ನು ಜೋಡಿಸಿದ್ದರೂ, ಉಪಗ್ರಹ ಆಧಾರಿತ ಹಡಗುಸಂಚಾರ(ಸ್ಯಾಟಲೈಟ್ ನ್ಯಾವಿಗೇಷನ್ ಸಿಸ್ಟಮ್) ಮತ್ತು ರೆಡಾರ್ ಗಳ ಬಳಕೆಯಿದ್ದರೂ, ಸ್ವಲ್ಪ ಎಚ್ಚರತಪ್ಪಿದರೂ ಅಲ್ಲಿ ಅಪಾ0ಯ ಕಟ್ಟಿಟ್ಟ ಬುತ್ತಿ0ಯಾಗಿದೆ. ಎರಡು ಸಾವಿರ ವರ್ಷಗಳ ಹಿಂದೆ ಹಡಗುಗಳು ಗಾತ್ರದಲ್ಲಿ ತುಂಬಾ ಚಿಕ್ಕದಾಗಿದ್ದವು ಮತ್ತು ಅವುಗಳಲ್ಲಿ ಉಪ0ಯೋಗಿಸುವ ಸಾಧನಗಳು ಸಹ ಈಗಿನಷ್ಟು ಮುಂದುವರೆದಿರಲಿಲ್ಲ. ಆದ್ದರಿಂದ ಸಮುದ್ರದಲ್ಲಿ 0ಯಾವಾಗಲೂ ಹಡಗುಗಳು ತೊಂದರೆಗಳಿಗೆ ಸಿಕ್ಕಿಕೊಳ್ಳುತ್ತಿದ್ದವು ಮತ್ತು ಒಡೆದು ನಾಶವಾಗುತ್ತಿದ್ದವು. ಆದುದರಿಂದ ಅಪೋಸ್ತಲನಾದ ಪೌಲನು ತೊಂದರೆಗಳ ಪಟ್ಟಿ0ಯಲ್ಲಿ ಸಮುದ್ರದ ತೊಂದರೆ0ಯನ್ನು ಕುರಿತು ''ಸಮುದ್ರದಲ್ಲಿ ಅಪಾ0ಯಗಳು''(1ಕೊರಿಂಥ 11:26) ಎಂದು ತಿಳಿಸಿದ್ದಾನೆ.

ಅಪೋಸ್ತಲನಾದ ಪೌಲನು ಸಮುದ್ರ ಪ್ರ0ಯಾಣಗಳನ್ನು ಮಾಡುವಾಗ ಅನೇಕಬಾರಿ ಹಡಗು ಒಡೆದು ಅಪಾ0ಯಕ್ಕೆ ಸಿಲುಕಿದ್ದನು; ಇವುಗಳಲ್ಲಿ ಬಹುಪಾಲು ಮೆಡಿಟರೇನಿ0ಯನ್ ಸಮುದ್ರದಲ್ಲಿ ಸಂಭವಿಸಿದವುಗಳಾಗಿವೆ. ಅವುಗಳಲ್ಲಿ ಅಪಾ0ಯಕಾರಿ0ಯಾಗಿ ಹಡಗು ಒಡೆದುಹೋದ ಒಂದು ಸಂಗತಿ0ಯನ್ನು ಅಪೋಸ್ತಲರ ಕೃತ್ಯಗಳು 27ನೇ ಅಧ್ಯಾ0ಯದಲ್ಲಿ ವಿವರವಾಗಿ ತಿಳಿಸಿದ್ದಾನೆ. ಇದು ಸಮುದ್ರದ ಅಪಾ0ಯಗಳನ್ನು ವಿವರಿಸುವ ಮುಖ್ಯವಾದ ಚಾರಿತ್ರಿಕ ಘಟನೆ0ಯಾಗಿದೆ; ಆದರೆ ದೇವರು ಹೇಗೆ ಅಪಾ0ಯದಲ್ಲಿ ಸಿಲುಕಿದ ಅಪೋಸ್ತಲರು ಮತ್ತು ಅವರ ಜೊತೆ0ಯಲ್ಲಿದ್ದವರನ್ನು ಕಾಪಾಡಿದ ಎಂಬುದು ಇದಕ್ಕಿಂತಲೂ ಮುಖ್ಯವಾದ ಸಂಗತಿ0ಯಾಗಿದೆ.

## ಬಿರುಗಾಳಿ0ಯ ವಾತಾವರಣ

ಕೀರ್ತನೆಕಾರ 107ನೇ ಕೀರ್ತನೆಗಳಲ್ಲಿ ಸಾಗರದಲ್ಲಿ ಬಿರುಗಾಳಿ0ಯೆದ್ದಾಗ 0ಯಾವರೀತಿ ಇರುತ್ತದೆ ಎಂಬುದನ್ನು ಬಹಳ ವಿಶೇಷವಾಗಿ ವಿವರಿಸಿದ್ದಾನೆ. ಆತ ಹೇಳುತ್ತಾನೆ;

''ಹಡಗುಹತ್ತಿ ಸಮುದ್ರ ಪ್ರ0ಯಾಣ ಮಾಡುತ್ತಾ ಮಹಾಜಲರಾಶಿ0ಯಲ್ಲಿ ತಮ್ಮ



ಉದ್ಯೋಗವನ್ನು ನಡಿಸುವವರು 0ಯೆಹೋವನ ಮಹತ್ಕಾರ್0ಯಗಳನ್ನು ಅಗಾಧಜಲದಲ್ಲಿ ಆತನ ಅದ್ಭುತಗಳನ್ನು ನೋಡುತ್ತಾರೆ. ಅವರು ಆಕಾಶಕ್ಕೆ ಏರುತ್ತಲೂ ಅಗಾಧಕ್ಕೆ ಇಳಿ0ಯುತ್ತಲೂ ಕಂಗೆಟ್ಟು ಕರಗಿ ಹೋದರು. ಅವರು ದಿಕ್ಕುತೋರದವರಾಗಿ ಸುತ್ತುತ್ತಾ ಕುಡಿಕರಂತೆ ಹೊ0ಯ್ದಾಡುತ್ತಿದ್ದರು. ಅವರು ತಮ್ಮ ಇಕ್ಕಟ್ಟಿನ ಸಮ0ಯದಲ್ಲಿ 0ಯೆಹೋವನಿಗೆ ಮೊರೆಯಿಡಲು ಆತನು ಅವರನ್ನು ಕಷ್ಟದಿಂದ ಹೊರತಂದನು. ಆತನು ಬಿರುಗಾಳಿ0ಯನ್ನು ಶಾಂತಪಡಿಸಿದನು; ತೆರೆಗಳು ನಿಂತವು'' (ಕೀರ್ತನೆ 107:23–29).

ಮೇಲಿನ ವಾಕ್ಯಗಳು ಹಡಗು ಬಿರುಗಾಳಿಗೆ ಸಿಕ್ಕಿಹಾಕಿಕೊಂಡರೆ ಹಡಗಿನಲ್ಲಿರುವವರ ಪರಿಸ್ಥಿತಿ ಏನು ಎಂಬುದರ ವಿವರಣೆ0ಯಾಗಿದೆ ಮತ್ತು ಬಿರುಗಾಳಿ0ಯ ಶಕ್ತಿ ಎಷ್ಟು ಭ0ಯಂಕರವಾಗಿರುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ. ಆದರೆ 0ಯೆಹೋವದೇವರು ಇವೆಲ್ಲವುಗಳನ್ನು ನಿ0ಯಂತ್ರಿಸುತ್ತಾನೆ ಎಂಬುದನ್ನು ಕೀರ್ತನೆಕಾರ ಅರ್ಥಮಾಡಿಕೊಂಡಿದ್ದನು. ಆದಕ್ಕಾಗಿ ಆತ ದೇವರು ಬಿರುಗಾಳಿ0ಯನ್ನು ಶಾಂತಪಡಿಸುತ್ತಾನೆ(ವಚನ 29) ಮತ್ತು ಹಡಗುಗಳನ್ನು ರೇವು(ಹಡಗಿನ ಬಂದರು)ಗಳಿಗೆ ಸುರಕ್ಷಿತವಾಗಿ ತಲುಪಿಸುತ್ತಾನೆ(ವಚನ 30) ಎಂದು ತಿಳಿಸಿದ್ದಾನೆ.

## ಗಂಡಾಂತರದಿಂದ ಪಾರಾಗುವುದು :

ನೀವು ಒಂದು ಸಣ್ಣ ಹಡಗಿನಲ್ಲಿ ಸಮುದ್ರ0ಯಾನಕ್ಕೆ ಹೊರಟಿದ್ದೀರಿ ಎಂದು ಕಲ್ಪನೆ ಮಾಡಿಕೊಳ್ಳಿ, ನೀವು ತೀರಪ್ರದೇಶವನ್ನು ಬಿಟ್ಟು ಸಮುದ್ರದ ಮಧ್ಯಭಾಗದಲ್ಲಿ ಪ್ರ0ಯಾಣ ಮಾಡುತ್ತಿರುವ ಸಂದರ್ಭದಲ್ಲಿ ಇದ್ದಕ್ಕಿದ್ದ ಹಾಗೆ0ಯೇ ಬಿರುಗಾಳಿ ಬೀಸಲು ಪ್ರಾರಂಭಿಸಿ, ಭ0ಯಂಕರ ಚಂಡಮಾರುತದ ಮಳೆ ಬೀಳಲು ಪ್ರಾರಂಭವಾಗಿ ನಿಮ್ಮ ಹಡಗಿಗೆ ತೊಂದರೆ ಉಂಟಾಗುತ್ತದೆ ಎಂದು ಭಾವಿಸಿ, ಬಿರುಗಾಳಿಗೆ ಸಿಲುಕಿದ ನಿಮ್ಮ ಹಡಗು ಒಮ್ಮೆಲೇ ಹತ್ತಾರು ಮೀಟರ್ ಎತ್ತರಕ್ಕೆ ಅಲೆಗಳಿಂದ ಎತ್ತಲ್ಪಟ್ಟರೆ ಮತ್ತು ಮತ್ತೊಂದು ಕ್ಷಣಕ್ಕೆ ಹತ್ತಾರು ಮೀಟರ್ ಕೆಳಕ್ಕೆ ಚಲಿಸಿದರೆ, ನಿಮಗೆ ಹೇಗನಿಸುತ್ತದೆ. ನಿಮ್ಮ ಹಡಗು ಮುರಿ0ಯುವ ಸ್ಥಿತಿಗೆ ಬಂದು, ಸಮುದ್ರದ ನೀರು ನಿಮ್ಮ ಮೇಲೆ ಬೀಳತೊಡಗಿದಾಗ, ನಿಮ್ಮ ಜೀವದ ಮೇಲಿನ ಆಸೆ0ಯೇ ಹೋಗುತ್ತದೆ ಅಲ್ಲವೇ? ಸಮುದ್ರವು ಕೃಪೆತೋರಿದರೆ ಮಾತ್ರ ಬದುಕುಳಿ0ಯಲು ಸಾಧ್ಯ ಎಂದೆನಿಸುತ್ತದೆ ಅಲ್ಲವೇ? ಆ ಕ್ಷಣಕ್ಕೆ ಮನಸ್ಸಿಗೆ ದಿಗ್ಭ್ರಾಂತಿ0ಯುಂಟಾಗುತ್ತದೆ, ಬದುಕಲು ಬೇರೆ ದಾರಿ0ಯೇ ಇಲ್ಲವೇ ಇಲ್ಲ, ನಮ್ಮ ಜೀವ ಇಲ್ಲಿಗೆ ಮುಗಿಯಿತು ಅಂದುಕೊಳ್ಳುತ್ತಿರುವಾಗಲೇ, ಒಂದು ಜೀವರಕ್ಷಕ ದೋಣಿ ಆಗಮಿಸಿ ಅದರಲ್ಲಿನ ಜೀವರಕ್ಷಕ ದಳದವರು ನಿಮ್ಮ ಹಡಗಿನವರನ್ನು ಬಿರುಗಾಳಿ0ಯ ಹೊಡೆತದಿಂದ, ಮುರಿದಿರುವ ಹಡಗಿನಿಂದ ಪಾರುಮಾಡಿ ಶಾಂತವಾಗಿರುವ ದಡಕ್ಕೆ ಸೇರಿಸಿದರೆ ನಿಮಗೆ ಹೇಗನಿಸುತ್ತದೆ. ಆ ಸಂದರ್ಭದಲ್ಲಿ ಪರಲೋಕವೇ ನಮಗೆ ಸಿಕ್ಕಷ್ಟು ಸಂತೋಷವಾಗುತ್ತದಲ್ಲವೇ!


## ನೀರಿನ ಮೇಲೆ ನಡೆ0ಯುವುದು :

ನಾವು ಮೇಲೆ ನೋಡಿದಂತಹ ಅನುಭವವು 0ಯೇಸುವಿನ ಶಿಷ್ಯರಿಗೂ ಸಹ ಆಗಿತ್ತು. ಒಮ್ಮೆ 0ಯೇಸುಕ್ರಿಸ್ತನ ಶಿಷ್ಯರು ಗಲಿಲಾ0ಯ ಸಮುದ್ರದಲ್ಲಿ ಪ್ರ0ಯಾಣ ಮಾಡುವಾಗ ಬಿರುಗಾಳಿಗೆ ಸಿಲುಕಿಕೊಂಡರು, ಅವರು ನುರಿತ ಮೀನುಗಾರರಾಗಿದ್ದರೂ ಬಿರುಗಾಳಿ0ಯ ಅಲೆಗಳ ವಿರುದ್ಧ ಪ್ರ0ಯಾಣ ಮಾಡಲು ಸಾಧ್ಯವಾಗದೆ ಅಪಾ0ಯಕ್ಕೆ ಸಿಲುಕಿದರು, ಅವರು ಬದುಕುಳಿ0ಯಲು ಅಲ್ಲಿ 0ಯಾವುದೇ ಜೀವರಕ್ಷಕ ದೋಣಿಯಿರಲಿಲ್ಲ, ಆದರೆ 0ಯೇಸುಕ್ರಿಸ್ತ ಸಮುದ್ರದ ಮೇಲೆ ನಡೆ0ಯುತ್ತಾ ಅವರ

ಬಳಿಗೆ ಬಂದನು ಮತ್ತು ಅವರ ದೋಣಿ0ುನ್ನು ಸುರಕ್ಷಿತವಾಗಿ ದಡಕ್ಕೆ ಸೇರಿಸಿದನು. ಈ ವಿಷ0ುವಾಗಿ 0ೋಹಾನನ ಸುವಾರ್ತೆ0ುಲ್ಲಿ ಈ ರೀತಿ0ಾಗಿ ತಿಳಿಸಲ್ಪಟ್ಟಿದೆ.

"ಆಗ ಆತನನ್ನು ದೋಣಿ0ೊಳಕ್ಕೆ ಕರಕೊಳ್ಳುವುದಕ್ಕೆ ಮನಸ್ಸಾಗಿದರು; ಮತ್ತು ಆ ಕ್ಷಣವೇ ಆ ದೋಣಿ0ು ಅವರು ಹೋಗಬೇಕಿದ್ದ ಭೂಮಿಗೆ ಮುಟ್ಟಿತು" (0ೋಹಾನ 6:21).

ಇನ್ನೊಂದು ಸಂದರ್ಭದಲ್ಲಿ 0ೇಸು– ಇದೇ ಸಮುದ್ರವು ಬಿರುಗಾಳಿಗೆ ಸಿಲುಕಿರುವಾಗ ಕೇವಲ ಒಂದೇ ಮಾತಿನಿಂದ "ಸುಮ್ಮನಿರು ಮೊರೆ0ುಬೇಡ" (ಮಾರ್ಕ 4:39) ಎಂದು ಅಪ್ಪಣೆ ಕೊಟ್ಟು ಬಿರುಗಾಳಿ0ುನ್ನು ನಿಲ್ಲಿಸಿದ್ದನು. ಇದರಿಂದ ಅತ್ಯಾಶ್ಚ0ುರ್ಪಟ್ಟ 0ೇಸುವಿನ ಶಿಷ್ಯರು – "ಈತನು 0ಾರಿರಬಹುದು? ಗಾಳಿ0ೂ ಸಮುದ್ರವೂ ಸಹ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ" (ಮಾರ್ಕ 4:41) ಎಂದು ಮಾತನಾಡಿಕೊಂಡರು.



ಇಂದು ನಾವುಗಳು ಸಹ ಬಿರುಗಾಳಿಗೆ ಸಿಲುಕಿದ ಹಡಗಿನಲ್ಲಿರುವವರ ಸ್ಥಿತಿ0ುಲ್ಲಿದ್ದೇವೆ, ಈಗ ನಮ್ಮ ಮುಂದಿರುವ ಆ0ುಕ್ಕೆ0ುೆಂದರೆ ನಾವು ಅಲೆಗಳ, ಬಿರುಗಾಳಿ0ು ಹೊಡೆತಕ್ಕೆ ಸಿಲುಕಿ ಸಮುದ್ರದಲ್ಲಿ ಮುಳುಗಿ ನಾಶವಾಗುವುದು, ಅಥವಾ ರಕ್ಷಕನಿಂದ ರಕ್ಷಣೆಹೊಂದಿ ಜೀವವನ್ನು ಹೊಂದುವುದು. ದೇವರು ನಮ್ಮನ್ನು ರೋಬಾಟಗಳ ರೀತಿ0ುಲ್ಲಿ ಸೃಷ್ಟಿಮಾಡಿಲ್ಲ, ಬದಲಾಗಿ ನಮಗೆ ವಿವೇಕವನ್ನು ನೀಡಿ ನಮ್ಮ ಮುಂದೆ ಆ0ುಕ್ಕೆ0ುನ್ನು ಇಟ್ಟಿದ್ದಾನೆ. ಒಂದು ನಾವು ದೇವರ ಆಜ್ಞೆಗಳನ್ನು ಕೈಗೊಂಡು ನಡೆದು ಜೀವ ಉಳಿಸಿಕೊಳ್ಳುವುದು ಅಥವಾ ಆತನನ್ನು ಮರೆತು ನಾಶವಾಗುವುದು.

0ಾರು ದೇವರ ಆಜ್ಞೆಗಳನ್ನು ಕೈಗೊಂಡು ನಡೆ0ುುತ್ತಾರೋ ಅವರಿಗೆ ವಿಶೇಷವಾದ ವಾಗ್ದಾನಗಳನ್ನು ಮಾಡಿದ್ದಾನೆ. ನಾವು ಸಹ 0ೇಸುವಿನ ಶಿಷ್ಯರ ರೀತಿ0ುಲ್ಲಿ ನಮ್ಮ ಜೀವನದ 0ಾನಕ್ಕೆ 0ೇಸುವನ್ನು ನಮ್ಮ ಬಳಿಗೆ ಸೇರಿಸಿಕೊಳ್ಳಲು ಮನಸ್ಸಿಟ್ಟರೆ, ಆತ ನಾವು ಪರಲೋಕ ರಾಜ್ಯದಲ್ಲಿ ಶಾಶ್ವತವಾಗಿ ಜೀವಿಸುವಂತೆ ಮಾಡುತ್ತಾನೆ. ಆ ಪರಲೋಕ ರಾಜ್ಯವು ಶೀಘ್ರವೇ 0ೇಸುವಿನ ಮುಖಾಂತರ ಭೂಲೋಕದಲ್ಲಿ ಸ್ಥಾಪಿತವಾಗುತ್ತದೆ.

*–ಅಲೆಕ್ಸ್ ಮದರ್ಸ್‌ಡಿಲ್*



# 0ೇಸುಕ್ರಿಸ್ತನನ್ನು ಕುರಿತ ಹಳೆ0ು ಒಡಂಬಡಿಕೆ0ು ಪ್ರವಾದನೆಗಳು

ಸತ್ಯವೇದದ ಹಳೆ0ು ಒಡಂಬಡಿಕೆ(0ೇಸುಕ್ರಿಸ್ತ ಜನಿಸುವುದಕ್ಕಿಂತ ಮುಂಚಿತವಾಗಿ ಬರೆಸಲ್ಪಟ್ಟಿರುವುದು)0ುಲ್ಲಿ ಇಸ್ರಾ0ೇಲ್ಯರ ರಕ್ಷಕ ಮತ್ತು ಅರಸನಾದ ಮೆಸ್ಸೀ0ು(ಅಂದರೆ ಅಭಿಷೇಕಿಸಲ್ಪಟ್ಟವನು)ನನ್ನು ಕುರಿತು ಅನೇಕ ಪ್ರವಾದನೆಗಳನ್ನು ತಿಳಿಸಿದೆ. ಆತನ ಹುಟ್ಟುವಿಕೆ, ಆತನ ವಂಶಾವಳಿ, ಆತನ ಜೀವಿತ ಮತ್ತು ಮರಣ; ಜೊತೆಗೆ ಎಲ್ಲಕ್ಕಿಂತ ಮುಖ್ಯವಾಗಿ ಆತ ಶಾಶ್ವತವಾಗಿ ರಾಜನಾಗಿ ಆಳ್ವಿಕೆ ನಡೆಸುವ ವಿಷ0ುಗಳನ್ನು ತಿಳಿಸಲಾಗಿದೆ. ಈ ಚಿಕ್ಕ ಅಧ್ಯ0ುನದಲ್ಲಿ ನಾವು 0ೇಸು ಪರಲೋಕಕ್ಕೆ ಏರಿಹೋಗುವುದಕ್ಕಿಂತ ಮುಂಚಿತವಾಗಿ ಪರಿಪೂರ್ಣಗೊಂಡ ಪ್ರವಾದನೆಗಳನ್ನು ತಿಳಿದುಕೊಳ್ಳೋಣ. 0ೇಸುವಿನ ಶಿಷ್ಯರಾದ ಅಪೊಸ್ತಲರು ಹಳೆ0ು ಒಡಂಬಡಿಕೆ0ು ಪ್ರವಾದನೆಗಳನ್ನು ಆಧಾರವಾಗಿಟ್ಟುಕೊಂಡು 0ೇಸುವೇ **"ಮೆಸ್ಸೀ0ು"**ನಾಗಿದ್ದಾನೆ ಎಂದು ಸಾಕ್ಷೀಕರಿಸಿದ್ದಾರೆ.

**ಅಧ್ಯ0ುನದ ಕೇಂದ್ರಿಕೃತ ವಾಕ್ಯಗಳು : ಕೀರ್ತನೆಗಳು 22ನೇ ಅಧ್ಯಾ0ು.**

ಈ ಅಧ್ಯಾ0ುವು ದಾವೀದನ ಪ್ರಾರ್ಥನೆ0ಾಗಿದ್ದು, ಆತ ವಿರೋಧಿಗಳಿಂದ ಸತತವಾಗಿ ಆಕ್ರಮಣಕ್ಕೆ ಈಡಾದಾಗ ರಚಿಸಿರುವಂತದಾಗಿದೆ. ಜೊತೆಗೆ ಇದು 0ೇಸುವನ್ನು ಕುರಿತ ಪ್ರವಾದನೆ0ು ಸಹ ಆಗಿದ್ದು, ಇದರಲ್ಲಿ 0ೇಸುವಿನ ಪ್ರಾಣಾರ್ಪಣೆ0ು ವಿಷ0ು ತಿಳಿಸಲ್ಪಟ್ಟಿದೆ ಮತ್ತು ಸುವಾರ್ತೆಗಳಲ್ಲಿ ಈ ವಾಕ್ಯಗಳು ಅನೇಕಬಾರಿ ಬಳಸಲ್ಪಟ್ಟಿದೆ.

## ಆತನ(0ೇಸುವಿನ)ಜೀವಿತ ಮುಂತಿಳಿಸಲ್ಪಟ್ಟಿದೆ :

0ೇಸುವಿನ ಜೀವಿತವನ್ನು ಕುರಿತು ಅನೇಕಬಾರಿ ಹಳೆ0ು ಒಡಂಬಡಿಕೆ0ುಲ್ಲಿ ಪ್ರವಾದನೆ0ು ಮುಖಾಂತರ ಮುಂತಿಳಿಸಲ್ಪಟ್ಟಿದೆ. ಅವುಗಳಲ್ಲಿ ಕೆಲವನ್ನು ನೋಡೋಣ.

**** ಆತ 0ೂದಾ ಕುಲದಲ್ಲಿ ಜನಿಸುತ್ತಾನೆ.***



"ರಾಜದಂಡವನ್ನು ಹಿಡಿ0ುತಕ್ಕವನು ಬರುವ ತನಕ ಆ ದಂಡವು 0ೆಹೂದನ ಕೈಯಿಂದ ತಪ್ಪುವುದಿಲ್ಲ, ಮುದ್ರೆಕೋಲು ಅವನ ಪಾದಗಳ ಬಳಿಯಿಂದ ಕದಲುವುದಿಲ್ಲ; ಅವನಿಗೆ ಅನ್ಯಜನಗಳು ವಿಧೇ0ುರಾಗುವರು" (ಆದಿಕಾಂಡ 49:) (ಲೂಕ 3:33ನೇ ವಾಕ್ಯದಲ್ಲಿ ಪರಿಪೂರ್ಣಗೊಂಡಿತು).

** ಆತ ದಾವೀದ ವಂಶದವನಾಗಿರುತ್ತಾನೆ*

“ನಿನ್ನ ಆ0ಯುಷ್ಕಾಲವು ಮುಗಿದು ನೀನು ಪಿತೃಗಳ ಬಳಿಗೆ ಸೇರಿದ ಮೇಲೆ ನಿನ್ನಿಂದ ಹುಟ್ಟುವವನನ್ನು ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರಪಡಿಸುವೆನು. ಅವನು ನನ್ನ ಹೆಸರಿಗಾಗಿ ಒಂದು ಮನೆ0ಯನ್ನು ಕಟ್ಟುವನು ನಾನು ಅವನ ರಾಜ್ಯಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು” (2ಸಮುವೇಲ 7:12–13) (ಪರಿಪೂರ್ಣಗೊಳ್ಳುವಿಕೆ ಮತ್ತಾ0ಯ 1:6, 16).

## ಕೆಲವು ಮುಖ್ಯವಾದ ವಾಕ್ಯಗಳು

| | |
|---|---|
| ಪ್ರಾರಂಭದ ಪ್ರವಾದನೆಗಳು | :– ಆದಿಕಾಂಡ 3:15, 49:10, ಧ.ಕಾ 18:15–19. |
| ದಾವೀದನ ಸಂತಾನ(ಮಗ) | :– 2ಸಮುವೇಲ 7:12–16, 0ಯೆಶಾ0ಯ 11:1–2, ಲೂಕ1:30–33. |
| ಅಬ್ರಹಮನ ಸಂತಾನ(ಮಗ) | :– ಆದಿಕಾಂಡ 22:15–18, ಗಲಾತ್ಯ 3:16. |
| ಕೀರ್ತನೆಗಳು | :– 2:8, 16, 22, 110, 118:22. |
| 0ಯೆಶಾ0ಯ | :– 7:14, 9:1–2, 11, 42, 49, 53, 61. |
| ಅನಂತರದ ಪ್ರವಾದನೆಗಳು | :– 0ಯೆರೆಮೀ0ಯ 23:5–6, ದಾನಿ0ಯೇಲ 7:9–14, ಮೀಕ 5:2, ಜೆಕ0ರ್ಯ 9:9, 12:10, 14:3–4. |

** ಆತ ಬೇತ್ಲೆಹೇಮಿನಲ್ಲಿ ಜನಿಸುತ್ತಾನೆ.*

“ಎಫ್ರಾತದ ಬೇತ್ಲೆಹೇಮೇ, ನೀನು 0ಯೆಹೂದದ ಗ್ರಾಮಗಳಲ್ಲಿ ಚಿಕ್ಕ ದಾಗಿದ್ದರೂ ಇಸ್ರಾ0ಯೇಲ್ಯರನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು; ಆತನ ಹೊರಡೋಣೋದ ಮೂಲವು ಪುರಾತನವೂ ಅನಾದಿ0ಯೂ ಅದದ್ದು” (ಮೀಕ 5:2) (ಪರಿಪೂರ್ಣಗೊಳ್ಳುವಿಕೆ ಮತ್ತಾ0ಯ 2:4–6).

** ಆತ ಕನ್ಯೆ0ಯಲ್ಲಿ ಜನಿಸುತ್ತಾನೆ.*

“ಇದರಿಂದ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು, ಇಗೋ ಒಬ್ಬ ಕನ್ಯಕೆ0ಯ ಗರ್ಭಿಣಿ0ಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು” (0ಯೆಶಾ0ಯ 7:14) (ಪರಿಪೂರ್ಣಗೊಳ್ಳುವಿಕೆ :– ಮತ್ತಾ0ಯ 1:18).

** ಆತ ಗಲಿಲಾ0ಯ ಪ್ರಾಂತ್ಯದಲ್ಲಿ ವಾಸಿಸುತ್ತಾನೆ.*




“ಆದರೆ ಸಂಕಟಪಟ್ಟ ದೇಶಕ್ಕೆ ಅಂಧಕಾರವಿನ್ನಿಲ್ಲ, ಪೂರ್ವಕಾಲದಲ್ಲಿ ಜಬುಲೋನ್ ಮತ್ತು ನಫ್ತಾಲಿ ಸೀಮೆಗಳನ್ನು ಆತನು ಅವಮಾನಕ್ಕೆ ಗುರಿಮಾಡಿದನು; ಅನಂತರದಲ್ಲಿ 0ಯೋರ್ದನಿನ ಆಚೆ0ಯ ಸೀಮೆ, ಸಮುದ್ರದ ಕಡೆಗಿರುವ ಸೀಮೆ, ಅನ್ಯಜನಗಳಿರುವ ಗಲಿಲಾ0ಯ ಸೀಮೆ ಈ ಪ್ರಾಂತ್ಯವನ್ನೆಲ್ಲಾ ಘನಪಡಿಸಿದ್ದಾನೆ. ಕತ್ತಲಿನಲ್ಲಿ ಸಂಚರಿಸುದ ಜನರಿಗೆ ದೊಡ್ಡಬೆಳಕು ಕಾಣಿಸಿತು; ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಪ್ರಕಾಶವು ಹೊಳೆಯಿತು” (0ಯೆಶಾ0ಯ 9:1–2) (ಪರಿಪೂರ್ಣಗೊಳ್ಳುವಿಕೆ :– ಮತ್ತಾ0ಯ 4:12–16).



** ಆತ ಸ್ವಜನರಿಂದ ನಿರಾಕರಿಸಲ್ಪಡುತ್ತಾನೆ.*

“ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಷ್ಟಕ್ಕೊಳಗಾದವನೂ, ವ್ಯಾಧಿಪೀಡಿತನು, ಜನರು ಮುಖವನ್ನು ಓರೆಮಾಡಿಕೊಳ್ಳುವ ಧಿಕ್ಕಾರಕ್ಕೆ ಒಳಗಾದವನೂ ಆಗಿದ್ದನು, ನಾವು ಅವನನ್ನು ಲಕ್ಷಕ್ಕೇ ತರಲಿಲ್ಲ” (0ಯೆಶಾ0ಯ 53:3) (ಪರಿಪೂರ್ಣಗೊಳ್ಳುವಿಕೆ :– 0ಯೋಹಾನ1:11).

** ಆತ ಪ್ರಾ0ಯದ ಕತ್ತೆಮರಿ0ಯ ಮೇಲೆ ಕುಳಿತು 0ಯೆರೂಸಲೇಮಿಗೆ ಬರುತ್ತಾನೆ.*



“ಚಿ0ಯೋನ್ ನಗರಿ0ಯೇ, ಬಹುಸಂತೋಷಪಡು; 0ಯೆರೂಸಲೇಮ್ ಪುರಿ0ಯೇ, ಹರ್ಷಧ್ವನಿಗೈ; ನೋಡು ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ; ಆತನು ನ್ಯಾ0ಯವಂತನು, ಸುರಕ್ಷಿತನೂ, ಶಾಂತಗುಣವುಳ್ಳವನಾಗಿ0ಯೂ ಕತ್ತೆ0ಯನ್ನು ಪ್ರಾ0ಯದ ಕತ್ತೆಮರಿ0ಯನ್ನು ಹತ್ತಿದವನಾಗಿ0ಯೂ ಬರುತ್ತಾನೆ” (ಜೆಕ0ರ್ಯ 9:9) (ಪರಿಪೂರ್ಣಗೊಳ್ಳುವಿಕೆ :–0ಯೋಹಾನ 12:13–15).

## 0ಯೇಸುವೇ ಮುಖ್ಯ ಗುರಿ

ಪ್ರವಾದನ ವಾಕ್ಯಗಳಲ್ಲಿ ನೇರವಾಗಿ 0ಯೇಸುವನ್ನು ಗುರಿ0ಯಾಗಿಸಿ ತಿಳಿಸಿರುವಂತಹವುಗಳು ಆಗಿದ್ದರೆ, ಕೆಲವು ವಾಕ್ಯಗಳು 0ಯೇಸುವಿನ ಮುಖಾಂತರ ಆಗಬೇಕಾದ ಕಾರ್0ಯಕ್ಕೆ ಛಾ0ಯೆ0ಯ ವಿಧಗಳಾಗಿವೆ. ಅವುಗಳೆಲ್ಲವೂ 0ಯೇಸುವನ್ನೇ ಕೇಂದ್ರಗುರಿ0ಯಾಗಿಸಿವೆ. ಉದಾ:– ಪಸ್ಕಹಬ್ಬ, ಈ ಹಬ್ಬದಲ್ಲಿ ಪುರ್ಣಾಂಗವಾದ ಕುರಿಮರಿ0ಯನ್ನು ಬಲಿ0ಯಾಗಿ ಅರ್ಪಿಸಬೇಕಿತ್ತು(ವಿಮೋಚನಾಕಾಂಡ 12:3–6). ಇದು ಮುಂದೆ ಪರಿಪೂರ್ಣನಾದ 0ಯೇಸುವಿನ ಬಲಿದಾನದ ಸಂಕೇತವಾಗಿದೆ. 0ಯೇಸು ದೇವರ 0ಯಜ್ಞದ ಕುರಿ0ಯಾಗಿದ್ದು ಲೋಕದ ಪಾಪವನ್ನು ನಿವಾರಣೆ ಮಾಡುವವನಾಗಿದ್ದಾನೆ (0ಯೋಹಾನ1:29). ಅದೇ ರೀತಿ ಹಳೆ0ಯ ಒಡಂಬಡಿಕೆ0ಯ ಕೆಲವು ಜನರು 0ಯೇಸುವಿಗೆ ಛಾ0ಯೆ0ಯಾಗಿದ್ದಾರೆ. ಉದಾಹರಣೆಗೆ, ದೇವರು ಅಬ್ರಹಾಮನಿಗೆ ಆತನ ಮಗನಾದ ಇಸಾಕನನ್ನು 0ಯೆರೂಸಲೇಮ್ ಬಳಿ0ಯ ಮೋರಿ0ಯ ಗುಡ್ಡದಲ್ಲಿ ಅರ್ಪಿಸುವಂತೆ ಕೇಳಿದ್ದನು, ಇದು ಮುಂದೆ ದೇವರು ತನ್ನ ಒಬ್ಬನೇ ಮಗನಾದ 0ಯೇಸುವನ್ನು 0ಯೆರೂಸಲೇಮ್ ಬಳಿ0ಯಲ್ಲಿ ಅರ್ಪಿಸುವುದರ ಸಂಕೇತವಾಗಿತ್ತು.

**** ಆತ ಮರಣದಂಡನೆಗೆ ಈಡಾಗುತ್ತಾನೆ.***



“ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ. ಹಿಂಸೆಯ ನ್ಯಾಯದಿಂದ ಕೊಲ್ಲಲ್ಪಟ್ಟನು, ಆಹಾ, ಇವನು ಜೀವಲೋಕದಿಂದ ಕೀಳಲ್ಪಟ್ಟಿದ್ದಾನೆ, ನಮ್ಮ ಜನಗಳ ದ್ರೋಹಗಳ ದೆಸೆಯಿಂದ ಈ ಪೆಟ್ಟು ಅವನ ಮೇಲೆ ಬಿತ್ತಲ್ಲಾ ಎಂದು ಅವನ ಕಾಲದಲ್ಲಿ ಯಾರು ಮನಮುಟ್ಟಿ ಮರುಗಿದರು?” (ಯೆಶಾಯ 53:7–8) (ಪರಿಪೂರ್ಣಗೊಳ್ಳುವಿಕೆ :– ಮತ್ತಾಯ 27:12–14).

**** ಜನರು ಆತನ ಬಟ್ಟೆಗಳಿಗೆ ಚೀಟುಹಾಕಿ ಹಂಚಿಕೊಳ್ಳುತ್ತಾರೆ.***

“ನನ್ನ ಮೇಲ್ಹೊದಿಕೆಯನ್ನು ತಮ್ಮಲ್ಲಿ ಪಾಲುಮಾಡಿಕೊಳ್ಳುತ್ತಾರೆ; ನನ್ನ ಅಂಗಿಗೋಸ್ಕರ ಚೀಟುಹಾಕುತ್ತಾರೆ” (ಕೀರ್ತನೆಗಳು 22:18) (ಪರಿಪೂರ್ಣಗೊಳ್ಳುವಿಕೆ :–ಯೋಹಾನ 19:23).

**** ಆತ ಕ್ರೂರ(ಶಿಲುಬೆಯ ಮರಣ) ಮರಣಕ್ಕೆ ಈಡಾಗುತ್ತಾನೆ.***



“ನಾಯಿಗಳು ನನ್ನನ್ನು ಸುತ್ತಿಕೊಂಡಿವೆ; ದುಷ್ಟರ ಗುಂಪು ನನ್ನನ್ನು ಆವರಿಸಿಕೊಂಡಿದೆ. ನನ್ನ ಕೈಕಾಲುಗಳನ್ನು ತಿವಿದಿದ್ದಾರೆ” (ಕೀರ್ತನೆಗಳು 22:16) (ಪರಿಪೂರ್ಣಗೊಳ್ಳುವಿಕೆ :–ಮತ್ತಾಯ 27:38).

**** ಆತ ಮರಣದಿಂದ ಪುನರುತ್ಥಾನ ಪಡೆಯುತ್ತಾನೆ.***

“ಯಾಕಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳ(ಸಮಾಧಿ)ದಲ್ಲಿ ಬಿಡುವುದಿಲ್ಲ; ನಿನ ಪ್ರಿಯನಿಗೆ ಅಧೋಲೋಕವನ್ನು ನೋಡಗೊಡಿಸುವುದಿಲ್ಲ” (ಕೀರ್ತನೆಗಳು 16:10) (ಪರಿಪೂರ್ಣಗೊಳ್ಳುವಿಕೆ :– ಮತ್ತಾಯ 28:5–9).

ಯೇಸುವನ್ನು ಕುರಿತು ಈ ರೀತಿಯಾದ ಅನೇಕ ಪ್ರವಾದನೆಗಳಿವೆ. ನೀವು ಕೂಡ ಸತ್ಯವೇದದಲ್ಲಿ ಹುಡುಕಿ ನೋಡಿ ತಿಳಿಯಬಹುದಾಗಿದೆ.



# ಯೇಸು ಮೆಸ್ಸೀಯನಾಗಿದ್ದಾನೆ



ಮೆಸ್ಸೀಯ ಮತ್ತು ಕ್ರೈಸ್ಟ್(ಕ್ರಿಸ್ತ) ಎಂಬ ಪದಗಳು ಕ್ರಮವಾಗಿ ಇಬ್ರಿಯ ಮತ್ತು ಗ್ರೀಕ್ ಭಾಷೆಯ ಪದಗಳಾಗಿದ್ದು ಇವುಗಳೆರಡರ ಅರ್ಥ ಒಂದೇ ಆಗಿದ್ದು **“ಅಭಿಷೇಕಿಸಲ್ಪಟ್ಟವನು”** ಎಂಬುದಾಗಿದೆ. ಈ ಎರಡು ಹೆಸರು(ಬಿರುದು)ಗಳು ಯೇಸುವಿಗೆ ಅನ್ವಯವಾಗುವಂತಹವುಗಳಾಗಿವೆ. ಏಕಂದರೆ ಯೇಸು ದೇವರಿಂದ ಅಭಿಷೇಕಿಸಲ್ಪಟ್ಟು ಮಾನವರ ರಕ್ಷಣೆಯ ಯೋಜನೆಯ ಕೇಂದ್ರಬಿಂದು ಆಗಿದ್ದಾನೆ. ಆದರೆ ಯೇಸು ಭೂಲೋಕದಲ್ಲಿ ಜೀವಿಸಿದ್ದ ಕಾಲದಲ್ಲಿ ಯೆಹೂದ್ಯರು ಯೇಸುವನ್ನು ಮೆಸ್ಸೀಯನೆಂದು ಅಂಗೀಕರಿಸಲಿಲ್ಲ, ಬದಲಾಗಿ ಮೆಸ್ಸೀಯ ಮುಂದೆ ಬರುತ್ತಾನೆ ಎನ್ನುವ ನಿರೀಕ್ಷೆಯಲ್ಲಿಯೇ ಇದ್ದರು. ಈ ಚಿಕ್ಕ ಅಧ್ಯಯನದಲ್ಲಿ ಅಂದಿನ ಜನರು ಏಕೆ ಮೆಸ್ಸೀಯನನ್ನು ಗುರುತಿಸಲಿಲ್ಲ ಎಂಬುದನ್ನು ವಿವರಿಸಲಾಗಿದೆ.

**ಅಧ್ಯಯನ ಕೇಂದ್ರಿಕೃತ ವಾಕ್ಯಗಳು : ಲೂಕ 24:13–32.**

ಯೇಸುವನ್ನು ಸೆರೆಹಿಡಿದು, ಕ್ರೂರವಾಗಿ ಹಿಂಸಿಸಿ, ಮರಣದಂಡನೆ ವಿಧಿಸಿದಾಗ ಆತನ ಶಿಷ್ಯರು ದಿಕ್ಕೆಟ್ಟರು, ಅವರ ನಿರೀಕ್ಷೆಗಳೆಲ್ಲ ನಾಶವಾದವು. ಗಮನಿಸಬೇಕಾದ ಒಂದು ಅಂಶವೆಂದರೆ, ಯೇಸು ತನ್ನ ಜೀವಿತಕಾಲದಲ್ಲಿ ತನ್ನ ಶಿಷ್ಯರೊಟ್ಟಿಗೆ ಇದ್ದಾಗ ಅನೇಕಬಾರಿ ಶಿಷ್ಯರಿಗೆ, ತಾನು ಸ್ವಜನರಿಂದ ಸೆರೆಹಿಡಿಯಲ್ಪಟ್ಟು ಘೋರ ಹಿಂಸೆಯನ್ನು ಅನುಭವಿಸಿ ಮರಣ ಹೊಂದುತ್ತೇನೆ ಎಂದು ತಿಳಿಸಿದ್ದ. ಆದರೆ ಈ ವಿಷಯವನ್ನು ಶಿಷ್ಯರು ಸರಿಯಾಗಿ ಅರ್ಥ ಮಾಡಿಕೊಂಡಿರಲಿಲ್ಲ. ಆದರೆ ಅವರು ಒಂದು ವಿಷಯವನ್ನು ಮಾತನಾಡುತ್ತಿದ್ದರು “ಈತನೇ ಇಸ್ರಾಯೇಲ್ಯರನ್ನು ಬಿಡಿಸುವವನಾಗಿದ್ದಾನೆ” (ವಚನ 21). ಈ ವಿಷಯವನ್ನು ಯೇಸುವಿನ ಶಿಷ್ಯರು ಎಮ್ಮಾಹು ಎಂಬ ಹಳ್ಳಿಗೆ ನಡೆದು ಹೋಗುತ್ತಿರಬೇಕಾದರೆ ತಿಳಿಸಿದ್ದಾರೆ. ಇಲ್ಲಿ ಅವರು ಮಾತನಾಡುತ್ತಿರುವ ವಿಷಯವನ್ನು ನೋಡುವಾಗ ನಮಗೆ ಕೆಲವೊಂದು ಪ್ರಶ್ನೆಗಳು ಉದ್ಭವಿಸುತ್ತವೆ.

1. ಇಬ್ಬರು ಶಿಷ್ಯರು ಯೇಸುವನ್ನು ಮೆಸ್ಸೀಯನೆಂದು ನಂಬಿದ್ದಮೇಲೆ, ಯೇಸು ಸತ್ತ ನಂತರ ಏಕೆ ಅವರ ನಂಬಿಕೆ ಬದಲಾಗಿ ಹೋಯಿತು?
2. ಅವರು ಮೆಸ್ಸೀಯ(ಕ್ರಿಸ್ತ)ನ ಕಾರ್ಯವನ್ನು ಎಮ್ಮಾಹು ಹಳ್ಳಿಯ ದಾರಿಯಲ್ಲಿ ಯೇಸುವಿನೊಡನೆ ಚರ್ಚಿಸುವುದಕ್ಕಿಂತ ಮೊದಲು ತಿಳಿಯಲು ಏಕೆ ವಿಫಲವಾಗಿದ್ದರು?
3. ಮೋಶೆ ಮತ್ತು ಎಲ್ಲಾ ಪ್ರವಾದಿಗಳ ಗ್ರಂಥಗಳ(ವಚನ 27)ನ್ನು ಆಧಾರವಾಗಿ ಯೇಸು ಬೋಧಿಸಿದ್ದೇಕೆ? ಅವುಗಳ ಅವಶ್ಯಕತೆಯಿತ್ತೇ?

0ಯೇಸುವಿನ ಶಿಷ್ಯರೂ ಮತ್ತು ಅಂದಿನ 0ಯೆಹೂದ್ಯರು ಮೆಸ್ಸೀ0ಯನ ಬಗ್ಗೆ ಸಂಪೂರ್ಣವಾಗಿ ತಪ್ಪಾಗಿ ತಿಳಿದಿದ್ದು ಏಕೆ? ಉತ್ತರ ಮೆಸ್ಸೀ0ಯನ ಎರಡು ಭಿನ್ನಕಾ0ರ್ಯಗಳಲ್ಲಿ ಅಡಕವಾಗಿದೆ. ಎರಡು ಕಾ0ರ್ಯಗಳೂ ಕೂಡ ದೇವರ 0ಯೋಜನೆ0ಯಲ್ಲಿ ಬಹು ಮುಖ್ಯವಾದವುಗಳಾಗಿವೆ. ಆ ಸಂದರ್ಭದಲ್ಲಿ 0ಯೆಹೂದ್ಯರು ಮೆಸ್ಸೀ0ಯನನ್ನು ಕುರಿತು ಒಂದು ವಿಷ0ಯವನ್ನು ಮಾತ್ರ ತಿಳಿದು ಅದನ್ನೇ ನಿರೀಕ್ಷೆ ಮಾಡುತ್ತಿದ್ದರು.

## ಮೆಸ್ಸೀ0ಯನ ಬಗ್ಗೆ ಪ್ರಸಿದ್ಧವಾದ ದೃಷ್ಟಿ :- ಸಾರ್ವಭೌವು ಅರಸ

ಹಳೆ0ಯ ಒಡಂಬಡಿಕೆ0ಯಲ್ಲಿ ''ಮೆಸ್ಸೀ0ಯ'' ಎಂದರೆ ಅಭಿಷೇಕಿಸಲ್ಪಟ್ಟವನು ಎಂಬ ಅರ್ಥವಿದೆ. ಹಲವಾರು ವಾಕ್ಯಗಳಲ್ಲಿ ಮೆಸ್ಸೀ0ಯ ಅಭಿಷಕ್ತನಾಗಿದ್ದು ರಾಜನಾಗಿರುತ್ತಾನೆ, ಆತ ಮುಂದೆ ಬರುತ್ತಾನೆ ಎಂದು ತಿಳಿಸಿದೆ. ಪ್ರವಾದಿ0ಯಾದ ದಾನಿ0ಯೇಲ ''ಅಭಿಷಕ್ತನಾದ ಪ್ರಭು'' (ದಾನಿ0ಯೇಲ 9:25) ಎಂದೇ ತಿಳಿಸಿದ್ದಾನೆ. ಅರಸನಾದ ದಾವೀದ ತನ್ನ ಕೀರ್ತನೆಗಳಲ್ಲಿ ಪ್ರಭುವಿನ



ಅಭಿಷೇಕದ ಬಗ್ಗೆ ತಿಳಿದಿದ್ದಾನೆ(ಉದಾ: ಕೀರ್ತನೆಗಳು 2:2). ಅಭಿಷೇಕ ತೈಲದಿಂದ ಅಭಿಷೇಕಿಸುವುದು ರಾಜನು ಸಿಂಹಾಸನವೇರುವುದಕ್ಕೆ ಸಾಂಕೇತಿಕವಾದುದಾಗಿದೆ ಅಥವಾ 0ಯಾಜಕ ಅಥವಾ ಪ್ರವಾದಿ ದೇವರ ಕಾ0ರ್ಯವನ್ನು ಪ್ರಾರಂಭಿಸುವುದಕ್ಕೆ ಸೂಚಕವಾಗಿದೆ.

ಅಭಿಷಕ್ತನಾದ ಅರಸನು ನೀತಿ, ಸತ್ಯತೆಗನುಗುಣವಾಗಿ ವಿಶಾಲವಾದ ಸಾಮ್ರಾಜ್ಯವನ್ನು ಆಳುವ ವಿಷ0ಯವನ್ನು ಅನೇಕ ವಾಕ್ಯಗಳಲ್ಲಿ ತಿಳಿಸಲಾಗಿದೆ. 0ಯೇಸುವಿನ ಕಾಲದ 0ಯೆಹೂದ್ಯರು, ಮೆಸ್ಸೀ0ಯನು ಬಂದು ನಮಗೆ ಅರಸನಾಗಿ ರೋಮ್ ಅರಸರುಗಳನ್ನು ಸೋಲಿಸಿ, ಮಹಿಮೆಯಿಂದ ಇಸ್ರಾ0ಯೇಲ್ ಸಾಮ್ರಾಜ್ಯವನ್ನು ಪುನರ್ ಸ್ಥಾಪಿಸುತ್ತಾನೆ. ಆತ ದಾವೀದನ ಸಿಂಹಾಸನದ ಮೇಲೆ ಕುಳಿತುಕೊಂಡು ನೀತಿ ಸತ್ಯತೆಗನುಗುಣವಾಗಿ ಆಳ್ವಿಕೆ ನಡೆಸುತ್ತಾನೆ. ಎಂಬುದು ಎಲ್ಲಾ ಜನರ ಮಹಾ ನಿರೀಕ್ಷೆ0ಯಾಗಿತ್ತು.

0ಯೇಸು ಅರಸನಾಗಿ ಆಳ್ವಿಕೆ ನಡೆಸುವ ಈ ನಂಬಿಕೆ0ಯ ಚಿತ್ರಣ ಅರ್ಥ ಮಾತ್ರ ಸರಿ0ಯಾದದ್ದು ಆಗಿತ್ತು. ಇದು ಮುಂದೆ 0ಯೇಸುವಿನ ಮೂಲಕ ದೇವರ ರಾಜ್ಯ ಸ್ಥಾಪನೆ0ಯಾದಾಗ, 0ಯೇಸು 0ಯೆರೂಸಲೇಮಿನಲ್ಲಿ ಅರಸನಾಗಿ ಇಡೀ ಭೂಲೋಕಕ್ಕೆ ಶಾಂತಿ ಸ್ಥಾಪಿಸುತ್ತಾನೆ. ಆದರೆ ಎಲ್ಲರೂ ಅರ್ಥಮಾಡಿಕೊಳ್ಳಲು ವಿಫಲರಾಗಿರುವ ವಿಷ0ಯವೆಂದರೆ, ಆತ(0ಯೇಸು) ರಾಜತ್ವವನ್ನು ಪಡೆ0ಯಬೇಕಾದರೆ ಶಿಲುಬೆ0ಯ ಮರಣದ ಮೂಲಕ ಆ ಕಿರೀಟ ಇಡಲ್ಪಟ್ಟಿದೆ ಎಂಬುದಾಗಿದೆ.




## ಮೆಸ್ಸೀ0ಯನ ಬಗ್ಗೆ ಮರೆತಿರುವ ದೃಷ್ಟಿ :- ಸಂಕಷ್ಟಕ್ಕೊಳಗಾದ ಸೇವಕ

ಈ ವಿಷ0ಯವಾಗಿ ಪ್ರವಾದಿ0ಯಾದ 0ಯೆಶಾ0ಯ ಮೆಸ್ಸೀ0ಯನ ಕಾ0ರ್ಯದ ಪೂರ್ಣಚಿತ್ರಣವನ್ನು ಕೊಡುತ್ತಾನೆ. ಆತ(ಮೆಸ್ಸೀ0ಯ) 0ಯಜ್ಞದ ಕುರಿ0ಯಾಗಿದ್ದು, ಆತ ಬಲಿ0ಯಾಗಿ ಅರ್ಪಿತಗೊಳ್ಳಬೇಕಾಗಿದೆ. ಆತ ದೇವರಿಗೆ ಸಂಪೂರ್ಣ ವಿಧೇ0ಯನಾಗಿ ಈ ಕಾ0ರ್ಯಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾನೆ.

''

''ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಷ್ಟಕ್ಕೊಳಗಾದವನು, ವ್ಯಾಧಿ ಪೀಡಿತನು, ಜನರು ಮುಖವನ್ನು ಓರೆಮಾಡಿಕೊಳ್ಳುವ ಧಿಕ್ಕಾರಕ್ಕೆ ಒಳಗಾದವನು ಆಗಿದ್ದನು. ನಾವು ಅವನನ್ನು ಲಕ್ಷ್ಯಕ್ಕೇ ತರಲಿಲ್ಲ, ನಿಜವಾಗಿ0ಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು, ಅವನು ಹೊತ್ತ ಹೊರೆ0ಯು ನಮ್ಮ ಸಂಕಟವೇ ಹೌದು; ನವಾದರೋ ಅವನು ದೇವರಿಂದ ಬಾಧಿತನು, ಪೆಟ್ಟುತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು. ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾ0ಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಶಾಂತಿ0ಯನ್ನುಂಟುಮಾಡುವ ದಂಡನೆ0ಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು'' (0ಯೆಶಾ0ಯ 53:3–5).



ಮೆಸ್ಸೀ0ಯನನ್ನು ಕುರಿತ ಈ ವಿಚಾರ 0ಯೆಹೂದ್ಯ ಜನರಿಗೆ ಮತ್ತು ಧಾರ್ಮಿಕ ಮುಖಂಡರಿಗೆ ಅಪರಿಚಿತ ವಿಚಾರವಾಗಿತ್ತು. 0ಯೇಸುವಿನ ಮುಖ್ಯ ಶಿಷ್ಯನಾಗಿದ್ದ ಪೇತ್ರನೇ ಒಂದುಬಾರಿ 0ಯೇಸು ಈ ವಿಷ0ಯವನ್ನು ತಿಳಿಸಿದಾಗ ಅಲ್ಲಗಳೆದಿದ್ದನು(ಮತ್ತಾ0ಯ 16:21–23). ಅನೇಕ ಪ್ರಾರಂಭದ ಹಿಂಬಾಲಕರು ಈ ವಿಷ0ಯದಿಂದ 0ಯೇಸುವಿನ ಮೇಲೆ ಆಸಕ್ತಿ0ಯನ್ನು ಕಳೆದುಕೊಂಡಿದ್ದರು.

## ಮುಖ್ಯವಾದ ಕೆಲವು ವಾಕ್ಯಗಳು

| | |
|---|---|
| ಮೆಸ್ಸೀ0ು/ಅಭಿಷಕ್ತ | : ಕೀರ್ತನೆಗಳು 2:2, 45:7, 89:20, 0ುೆಶಾ0ು 61:1–3 |
| ಸಂಕಷ್ಟಕ್ಕೊಳಗಾದ ಮೆಸ್ಸೀ0ು: | ಕೀರ್ತನೆಗಳು 22:1–21, 0ುೆಶಾ0ು 53, ದಾನಿ0ುೇಲ 9:26 |
| ಮುಂದೆ ಬರುವ ಅರಸ | : 2ಸಮುವೇಲ 7:12–16, ಕೀರ್ತನೆಗಳು 72, ಮೀಕ 5:2–4, 0ುೆರೆಮೀ0ು 23:5–6, ಜೆಕ0ುರ್ 9:9–10, ಮತ್ತಾ0ು 2:2 |
| ಹೊಸಒಡಂಬಡಿಕೆ ಕ್ರಿಸ್ತ | : ಮತ್ತಾ0ು 2:4, 22:41–45, ಮಾರ್ಕ 15:32, ಲೂಕ 2:11,0ುೋಹಾನ 4:25–26, 7:26–31, ಅ.ಕೃ. 2:29–36 |
| ದೇವರ ಕುರಿಮರಿ | : 0ುೋಹಾನ 1:29, 36, ಅ.ಕೃ 8:32–35, 1ಪೇತ್ರ 1:18–21, ಪ್ರಕಟನೆ 5:5–12. |

## ಎರಡು ದೃಷ್ಟಿಗಳ ಒಂದುಗೂಡಿಸುವಿಕೆ :– ದೇವರ ಮಹಾ0ುೋಜನೆ

ಮೆಸ್ಸೀ0ುನು ಹಳೆ0ು ಒಡಂಬಡಿಕೆ0ು ಎರಡು ವಿಷ0ುಗಳನ್ನು ಒಂದುಗೂಡಿಸಿದ್ದಾನೆ. ದೇವರ ಮಹಾ0ುೋಜನೆ0ುಲ್ಲಿ ಪರಿಪೂರ್ಣನಾದ ಮಾನವ(0ುೇಸು, ಮೆಸ್ಸೀ0ು) ತನ್ನನ್ನು ತಾನೇ ಸಮರ್ಪಿಸಿಕೊಂಡು ಮಾನವರ ಪಾಪಗಳನ್ನು ಪರಿಹರಿಸುತ್ತಾನೆ. 0ುಾರು ಆತನಲ್ಲಿ ಪರಿಪೂರ್ಣವಾದ ನಂಬಿಕೆ0ುನ್ನು ಇಡುತ್ತಾರೋ ಅವರಿಗೆ ದೇವರ ಮಾರ್ಗವು ತಿಳಿ0ುಲ್ಪಟ್ಟು, ಅವರುಗಳ ಪಾಪ ಕ್ಷಮಾಪಣೆ0ುಾಗುತ್ತವೆ. 0ುಾರು ಕ್ರಿಸ್ತನಲ್ಲಿ ಸ್ಥಿರವಾದ ನಂಬಿಕೆಯಿಡುತ್ತಾರೋ ಅವರ ನಂಬಿಕೆ ನೀತಿ0ುೆಂದು ಎಣಿಸಲ್ಪಡುತ್ತದೆ, 0ುೇಸು ಅವರಿಗೆ ಪಾಪ ಕ್ಷಮಾಪಣೆ ನೀಡಿ ನಿತ್ಯಜೀವವನ್ನು ಕೊಡುತ್ತಾನೆ.

‘‘ಮತ್ತು ಈ ಕಾರಣದಿಂದ ಆತನು ಒಂದು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ. ಮೊದಲನೆ0ು ಒಡಂಬಡಿಕೆ0ು ಕಾಲದಲ್ಲಿ ನಡೆದ ಅಕ್ರಮಗಳ ಪರಿಹಾರಕ್ಕಾಗಿ ಆತನು ಮರಣವನ್ನು ಅನುಭವಿಸಿದ್ದರಿಂದ ದೇವರಿಂದ ಕರೆಯಿಸಿಕೊಂಡವರು ವಾಗ್ದಾನವಾಗಿದ್ದ ನಿತ್ಯಬಾಧ್ಯತೆ0ುನ್ನು ಹೊಂದುವುದಕ್ಕೆ ಆತನ ಮೂಲಕ ಮಾರ್ಗವಾಯಿತು’’ (ಇಬ್ರಿ0ು 9:15).

ಮೋಶೆ0ು ಧರ್ಮಶಾಸ್ತ್ರದಲ್ಲಿ 0ುಜ್ಞವರ್ಪಿಸುವುದು ಮತ್ತು ಆರಾಧನೆ0ು 0ುೇಸುಕ್ರಿಸ್ತನ ಮಹಾಕಾರ್0ುದ ಛಾ0ುೆ0ುಾಗಿತ್ತು. 0ುೇಸುಕ್ರಿಸ್ತ ಮಹಾ0ುಾಜಕನ ಕಾರ್0ು ನಿರ್ವಹಿಸಿ ದೇವರ ಕೃಪೆ ದೊರೆ0ುುವಂತೆ ಮಾಡಿದ್ದಾನೆ. 0ುೇಸು ಮತ್ತೆ ಈ ಲೋಕಕ್ಕೆ ಬದುಕಿರುವವರಿಗೆ ಮತ್ತು ಸತ್ತವರಿಗೆ ನ್ಯಾಯತೀರಿಸಲು ಬರುತ್ತಾನೆ. ಆತ ದೇವರ ರಾಜ್ಯವನ್ನು ಭೂಲೋಕದಲ್ಲಿ ಸ್ಥಾಪಿಸುತ್ತಾನೆ. ಆತನ ರಾಜಧಾನಿ 0ುೆರೂಸಲೇಮ್ ಆಗಿರುತ್ತದೆ; ಆತ ತನ್ನವರನ್ನು ಪಾಪ ಮತ್ತು ಮರಣದಿಂದ



ರಕ್ಷಿಸುತ್ತಾನೆ. ಈ ರೀತಿ0ುಾಗಿ ಮೆಸ್ಸೀ0ು/ ಕ್ರಿಸ್ತ/ ಅರಸ/ ಪ್ರವಾದಿ/ ಸೇವಕ/ 0ುಜ್ಞದ ಕುರಿ0ು ಎಲ್ಲಾ ಪ್ರವಾದನೆಗಳು ಪರಿಪೂರ್ಣಗೊಳ್ಳುತ್ತವೆ.

‘‘ಹಾಗೆ0ುೇ ಕ್ರಿಸ್ತನು ಸಹ ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವುದಕ್ಕೋಸ್ಕರ ಒಂದೇಸಾರಿ ಸಮರ್ಪಿತನಾದನು, ಮತ್ತು ತನ್ನನ್ನು ನಿರೀಕ್ಷಿಸಿ ಕೊಂಡಿರುವವರಿಗೆ ರಕ್ಷಣೆ0ುನ್ನುಂಟುಮಾಡುವುದಕ್ಕೋಸ್ಕರ ಪಾಪ ಸಂಬಂಧವಿಲ್ಲದವನಾಗಿ ಎರಡನೆ0ು ಸಾರಿ ಕಾಣಿಸಿಕೊಳ್ಳುವನು’’ (ಇಬ್ರಿ0ು 9:27).

0ುೇಸುಕ್ರಿಸ್ತ ಮರಣಹೊಂದಿ ಪುನರುತ್ಥಾನ ಪಡೆ0ುುವವರೆಗೆ ದೇವರ 0ುೋಜನೆಗಳನ್ನು ಮತ್ತು ಕ್ರಿಸ್ತನ ಕಾರ್0ುಗಳನ್ನು ಸಂಪೂರ್ಣವಾಗಿ ಆತನ ಶಿಷ್ಯರು ಮತ್ತು ಹಿಂಬಾಲಕರು ಸಹ ಅರ್ಥಮಾಡಿಕೊಂಡಿರಲಿಲ್ಲ. 0ುೇಸುವಿನ ಪುನರುತ್ಥಾನದ ನಂತರ ಎಮ್ಮಾಹು ಹಳ್ಳಿ0ು ದಾರಿ0ುಲ್ಲಿ 0ುೇಸು ತನ್ನ ಶಿಷ್ಯರಿಗೆ ಮೆಸ್ಸೀ0ುನ ಪಾತ್ರವನ್ನು ಅರ್ಥಮಾಡಿಸಿದನು. ಆನಂತರ ಅಪೋಸ್ತಲರು 0ುೆಹೂದ್ಯರಿಗೆ ಮತ್ತು ಅನ್ಯಜನರಿಗೆ 0ುೇಸುವೇ ಕ್ರಿಸ್ತ/ ಮೆಸ್ಸೀ0ುನೆಂದು ದೇವರ 0ುೋಜನೆ0ುನ್ನು ತಿಳಿಸಿಕೊಟ್ಟರು.

ನಮಗೆ ಈಗ ದೇವರ ಕೃಪೆಯಿಂದ ಹಳೆ0ು ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎರಡನ್ನು ಒಳಗೊಂಡ ಸಂಪೂರ್ಣ ಸತ್ಯವೇದ ದೊರೆತಿದೆ. ನಾವುಗಳು 0ುೇಸುವಿನ ಕುರಿತಾದ ಹಳೆ0ು ಒಡಂಬಡಿಕೆ0ು ಪ್ರವಾದನೆಗಳನ್ನು, ಹೊಸ ಒಡಂಬಡಿಕೆ0ು 0ುೇಸುವಿನ ಸುವಾರ್ತೆಗಳನ್ನು ಮತ್ತು ಆತನ ಶಿಷ್ಯರ ವಿವರಣೆ0ು ಪತ್ರಿಕೆಗಳನ್ನು ಜೊತೆ0ುಾಗಿ ಓದಬಹುದು. ಈ ವಿಷ0ುವಾಗಿ ಅಪೋಸ್ತಲರು ಎರಡು ವಿಷ0ುಗಳನ್ನು ಸೇರಿಸಿ ನಮಗೆ ತಿಳಿಸಿಕೊಟ್ಟಿದ್ದಾರೆ. ನಮಗೆ ಈ ಸುವರ್ಣಾವಕಾಶ ಸಿಕ್ಕಿದ್ದಕ್ಕಾಗಿ ದೇವರಿಗೆ ನಾವು ಸ್ತೋತ್ರ ಸಲ್ಲಿಸುವವರಾಗಿರೋಣ, ಜೊತೆಗೆ ಈ ಅವಕಾಶಗಳನ್ನು 0ುೇಸುವಿನವರಾಗಿ ರಕ್ಷಣೆ0ುಲ್ಲಿ ಪಾಲುಗಾರರಾಗೋಣ.

## ಸಾರಾಂಶ :–

* ಮೆಸ್ಸೀ0ು ಮತ್ತು ಕ್ರಿಸ್ತ ಎಂಬ ಪದಗಳ ಅರ್ಥ **‘‘ಅಭಿಷೇಕಿಸಲ್ಪಟ್ಟವನು’’** ಎಂಬುದಾಗಿದೆ. ಈ ಬಿರುದುಗಳನ್ನು ವಾಗ್ದಾನದ ಅರಸನಿಗೆ ನೀಡಲಾಗಿದೆ, ಆತನೇ 0ುೇಸುವಾಗಿದ್ದಾನೆ.
* ಕ್ರಿಸ್ತ ರಾಜನಾಗಿ ಪದವಿಗೆ ಬರುವುದಕ್ಕಿಂತ ಮೊದಲು ಲೋಕದ ಪಾಪಕ್ಕೋಸ್ಕರ ಸಂಕಟವನ್ನು ಅನುಭವಿಸಿ, ದೇವರಿಗೆ ವಿಧೇ0ುನಾಗಿ ಮರಣ ಹೊಂದಬೇಕು ಮತ್ತು ಪುನರುತ್ಥಾನದ ಮೂಲಕ ನಿತ್ಯಜೀವವನ್ನು ಪಡೆದು ದೇವರಿಗೂ ಮಾನವರಿಗೂ ಮಧ್ಯಸ್ಥಗಾರನಾಗಿ 0ುಾರು ದೇವರಲ್ಲಿ ನಂಬಿಕೆಯಿಡುತ್ತಾರೋ ಅವರಿಗೆ ದೇವರ ಕೃಪೆ ಮತ್ತು ರಕ್ಷಣೆ ದೊರೆ0ುುವಂತೆ ಮಾಡುವವನಾಗಿದ್ದಾನೆ. ಆದರೆ 0ುೇಸುವೇ ಮೆಸ್ಸೀ0ುನೆಂದು ಆತ ಶ್ರಮೆ ಅನುಭವಿಸಿ ಮರಣಹೊಂದಿ, ಮರಣದಿಂದ ಎಬ್ಬಿಸಲ್ಪಡುವವರೆಗೂ ಅನೇಕರು ನಂಬಿರಲಿಲ್ಲ.
* 0ುೇಸುಕ್ರಿಸ್ತ ಎರಡನೇ ಬಾರಿಗೆ ಭೂಲೋಕಕ್ಕೆ ರಾಜನಾಗಿ ಹಿಂತಿರುಗಿ ಬಂದು ದೇವರ ರಾಜ್ಯ ಸ್ಥಾಪಿಸುವುದು ದೇವರ ಮಹಾ0ುೋಜನೆ0ುಾಗಿದೆ.


– – – – – – – – – – – – – – – – – – – – – – – –

# 0ಯೇಸು :– ದೇವಕುಮಾರ ಮತ್ತು ಮನುಷ್ಯಕುಮಾರ

0ಯೇಸುಕ್ರಿಸ್ತ ಅನುಪಮ ಗುಣವುಳ್ಳವನು. ಆತ ದೇವರ ಪವಿತ್ರ ಶಕ್ತಿಯಿಂದ ಮಾನವಳಾದ ಕನ್ಯೆಮರಿ0ಯಳಲ್ಲಿ ಜನಿಸಿದನು. ಆದ್ದರಿಂದ ಆತ ದೇವಕುಮಾರ ಮತ್ತು ಮನುಷ್ಯ ಕುಮಾರನಾಗಿದ್ದಾನೆ.

**ಅಧ್ಯ0ುನ ಕೇಂದ್ರಿಕೃತ ವಾಕ್ಯಗಳು :– ಲೂಕ 1:26–38**

ದೇವದೂತನಾದ ಗಬ್ರಿ0ಯೇಲನು ದೇವರಿಂದ ಕಳುಹಿಸಲ್ಪಟ್ಟು, ಮರಿ0ಯಳ ಬಳಿಗೆ ಬಂದು ನೀನು ದೇವರ ಪವಿತ್ರಶಕ್ತಿಯಿಂದ ಒಬ್ಬ ಮಗನನ್ನು ಪಡೆ0ಯುವೆ. ಅದುದರಿಂದ ಆ ಮಗು ದೇವಕುಮಾರನಾಗಿರುವನು ಮತ್ತು ನಿನ್ನಲ್ಲಿ ಜನಿಸುವುದರಿಂದ ಮನುಷ್ಯಕುಮಾರನಾಗಿರುವನು ಎಂದು ತಿಳಿಸಿದನು.



ಆನಂತರ ಮರಿ0ಯಳು 0ಯೋಸೇಫನೊಡನೆ ವಿವಾಹವಾದಳು, ಆದ್ದರಿಂದ 0ಯೋಸೇಫ 0ಯೇಸುವಿಗೆ ಮಲ ತಂದೆ0ಯಾಗಿದ್ದಾನೆ ಮತ್ತು ಮರಿ0ಯಳಿಗೆ 0ಯೋಸೇಫನಿಂದ ಇತರ ಮಕ್ಕಳುಗಳು ಜನಿಸಿದರು ಅವರುಗಳೆಲ್ಲಾ 0ಯೇಸುವಿಗೆ ಮಲಸಹೋದರ ಸಹೋದರಿ0ಯರಾಗಿದ್ದಾರೆ (ಮತ್ತಾ0ಯ 12:46–47, 13:55–56).

## ದೇವರ ಮಗ

ಸತ್ಯವೇದದ ಪ್ರಕಾರ 0ಯಾರಾರು ದೇವರ ವಾಕ್ಯಗಳನ್ನು ಅಂಗೀಕರಿಸಿ, ಆತನನ್ನು ನಂಬುವವರಾಗಿರುತ್ತಾರೋ ಅವರೆಲ್ಲಾ ದೇವರ ಮಕ್ಕಳಾಗಿರುತ್ತಾರೆ(0ಯೋಹಾನ 1:12). ನಾವುಗಳು ಕ್ರಿಸ್ತನ ಮೂಲಕ ದೇವರ ಕುಟುಂಬಕ್ಕೆ ಸೇರಿದ ಮಕ್ಕಳಾಗಿದ್ದೇವೆ(ಎಫೆಸ 1:5), ಆದರೆ 0ಯೇಸುಕ್ರಿಸ್ತ ದೇವರ ಒಬ್ಬನೇ ಮಗನಾಗಿದ್ದಾನೆ(0ಯೋಹನ 3:16). 0ಯೇಸುಕ್ರಿಸ್ತ ದೀಕ್ಷಾಸ್ನಾನವನ್ನು ಪಡೆದಾಗ ದೇವರೇ ಈ ಮಾತನ್ನು ತಿಳಿಸಿದ್ದಾನೆ–"ಈತನು ಪ್ರಿ0ಯನಾಗಿರುವ



ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ" (ಮತ್ತಾ0ಯ 3:17). ಮತ್ತೊಂದು ಕಡೆ ದೇವರು ಹೀಗೆ ಹೇಳಿದ್ದಾನೆ–"ಈತನು ಪ್ರಿ0ಯನಾಗಿರುವ ನನ್ನ ಮಗನು; ಈತನ ಮಾತನ್ನು ಕೇಳಿರಿ" (ಮಾರ್ಕ 9:7).

ಎಲ್ಲಾ ಮಕ್ಕಳ ರೀತಿ0ಯಲ್ಲಿ 0ಯೇಸುವು ಸಹ ತನ್ನ ತಂದೆ0ಯ ಗುಣಗಳನ್ನು ಹೊಂದಿದವನಾಗಿದ್ದನು. ಆತ ತನ್ನ ತಂದೆ(ದೇವರು) ತನ್ನ ಹಾಗೆ0ಯೇ ಇದ್ದಾನೆ ಎಂಬುದನ್ನು ನಮಗೆ ತೋರಿಸಿಕೊಟ್ಟನು. ಆದ್ದರಿಂದ ಆತ ಈ ರೀತಿ ತಿಳಿಸಿದ್ದಾನೆ–"ನನ್ನನ್ನು ನೋಡಿದವನು ತಂದೆ0ಯನ್ನು ನೋಡಿದ್ದಾನೆ" (0ಯೋಹಾನ 14:9). ನಾವುಗಳು ನೇರವಾಗಿ ತಂದೆ0ಯಾದ ದೇವರನ್ನು ಕಾಣಲು ಸಾಧ್ಯವಿಲ್ಲ, ಆದರೆ 0ಯೇಸುವನ್ನು ತಿಳಿದುಕೊಳ್ಳುವುದರ ಮೂಲಕ ದೇವರ ಗುಣಲಕ್ಷಣಗಳನ್ನು ತಿಳಿದುಕೊಳ್ಳಬಹುದಾಗಿದೆ.

### ಕೆಲವು ಮುಖ್ಯವಾದ ವಾಕ್ಯಗಳು

| | |
|---|---|
| ದೇವರ ಮಗ | : ಕೀರ್ತನೆ 2:7, ಮತ್ತಾ0ಯ 3:17, 8:29, 14:33, 16:16, 17:5, 26:63–64, 27:54, ಮಾರ್ಕ 1:1, 3:11, 9:7, 15:39, ಲೂಕ 1:35, 4:41, 22:20, 0ಯೋಹಾನ 1:34, 49, 5:18–19, 10:31–36, 11:27, 14:9, 19:7, 20:31, ಅಪೋಸ್ತಲರ ಕೃತ್ಯಗಳು 9:20, ರೋಮಾಪುರದವರಿಗೆ 1:4, ಇಬ್ರಿ0ಯರಿಗೆ 1:5, 3:6, 4:14, 5:5–8, 10ಯೋಹಾನ 4:15, 5:5. |
| ದೇವರಿಗೆ ಸರಿಸಮಾನನಲ್ಲ | : 0ಯೋಹಾನ 5:30, 8:28, 12:49, 14:10, 28 |
| ದೇವರಲ್ಲಿ ಒಂದಾಗಿದ್ದಾನೆ | : 0ಯೋಹಾನ 10:30, 17:20–22 |
| ಮನುಷ್ಯ ಕುಮಾರ | : ಮತ್ತಾ0ಯ 16:13, 27–28, ಮಾರ್ಕ 2:28, ಲೂಕ 22:69, 0ಯೋಹಾನ 9:35–37, ಫಿಲಿಪ್ಪಿ 2:7–8, ಇಬ್ರಿ0ಯ 2:14, 4:15, 5:2, 8–9, ಪ್ರಕಟಣೆ 1:13–14 |

ಆದಿ0ಯಲ್ಲಿ ದೇವರ 0ಯೋಜನೆ0ಯಲ್ಲಿದ್ದನು: 0ಯೋಹಾನ 17:5, 1ಪೇತ್ರ 1:20, ಪ್ರಕಟಣೆ 13:8.

0ಯೇಸುಕ್ರಿಸ್ತನು ದೇವರ ಮಗನಾಗಿದ್ದೇನೆ ಎಂದು ತಿಳಿಸಿಕೊಟ್ಟಾಗ 0ಯೆಹೂದ್ಯರು 0ಯೇಸುವನ್ನು ತಪ್ಪಾಗಿ ಅರ್ಥಮಾಡಿಕೊಂಡರು, ಈತ ತನ್ನನ್ನು ದೇವರಿಗೆ ಸರಿಸಮಾನ ಮಾಡಿಕೊಂಡಿದ್ದಾನೆ ಎಂದು ಕೋಪಗೊಂಡು ಆತನಿಗೆ ಮರಣದಂಡನೆ ವಿಧಿಸಬೇಕು ಎಂದು ತೀರ್ಮಾನಿಸಿಕೊಂಡರು. ಈ ವಿಷ0ಯವನ್ನು ನಾವು 0ಯೋಹನಸ ಸುವಾರ್ತೆ0ಯಲ್ಲಿ ನೋಡಬಹುದು;

"ಈ ಮಾತನ್ನು ಹೇಳಿದ್ದರಿಂದ ಆತನು ಸಬ್ಬತ್ ದಿನವನ್ನು ಅಲಕ್ಷ್ಯ ಮಾಡಿದ್ದಲ್ಲದೆ ದೇವರನ್ನು ತನ್ನ ತಂದೆ ಎಂದು ಹೇಳಿ ತನ್ನನ್ನುಸರಿಗಟ್ಟಿಕೊಂಡನೆಂದು 0ಯೆಹೂದ್ಯರು ಆತನನ್ನು ಕೊಲ್ಲುವುದಕ್ಕೆ ಮತ್ತಷ್ಟು ಪ್ರ0ಯತ್ನ ಮಾಡಿದರು"(0ಯೋಹಾನ 5:18).

ಆದರೆ 0ಯೇಸು ಅವರ ತಪ್ಪಾದ ತಿಳುವಳಿಕೆಗೆ ಉತ್ತರಕೊಡುತ್ತಾ ಅವರಿಗೆ ಅರ್ಥಮಾಡಿಸಿದನು.

“ಅದಕ್ಕೆ ಯೇಸು ಅವರಿಗೆ ನಿಮಗೆ ನಿಜನಿಜವಾಗಿ ಹೇಳುತ್ತೇನೆ, ತಂದೆಯು ಮಾಡುವುದನ್ನು ಕಂಡು ಮಗನು ಮಾಡುತ್ತಾನೆಯೇ ಹೊರತು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು; ಆತನು ಮಾಡುವುದನ್ನೆಲ್ಲಾ ಹಾಗೆಯೇ ಮಗನು ಮಾಡುತ್ತಾನೆ” (ಯೋಹಾನ 5:19).

ಯೇಸು ದೇವರಿಗೆ ಸರಿಸಮಾನನಲ್ಲ, ಆತನೇ–**“ತಂದೆಯು ನನಗಿಂತ ದೊಡ್ಡವನು”** (ಯೋಹಾನ 14:28) ಎಂದು ತಿಳಿಸಿದ್ದಾನೆ. ಜೊತೆಗೆ ತಾನು ದೇವರಿಗೆ ಅಧೀನನಾದವನು ಎಂದು ಅನೇಕಬಾರಿ ವಿವರಣೆಯನ್ನು ನೀಡಿದ್ದಾನೆ (ಯೋಹಾನ 5:30, 8:28, 12:49, 14:10).

## ಮನುಷ್ಯ ಕುಮಾರ

ಯೇಸು ಮಾನವಳಾದ ಮರಿಯಳಲ್ಲಿ ಜನಿಸಿರುವುದರಿಂದ ಮನುಷ್ಯ ಕುಮಾರನಾಗಿದ್ದಾನೆ. ಈ ವಿಷಯವಾಗಿ ಆತನೇ ಅನೇಕಬಾರಿ ತನ್ನನ್ನು “ಮನುಷ್ಯಕುಮಾರ” ಎಂದು ಕರೆದುಕೊಂಡಿದ್ದಾನೆ.

ಆತ ಮಾನವನಾಗಿದ್ದುದರಿಂದ ಮಾನವರ ಎಲ್ಲಾ ಗುಣಗಳನ್ನು ಹೊಂದಿದ್ದನು. ಅವನಿಗೆ ಸಹ ದಣಿವು ಆಗುತ್ತಿತ್ತು, ವಿಶ್ರಾಂತಿಯ ಅಗತ್ಯವಿತ್ತು(ಯೋಹಾನ 4:6).

ಆತನ ಸ್ನೇಹಿತನಾದ ಲಾಜರನು ಮರಣಹೊಂದಿದಾಗ ಆತನಿಗೆ ದುಃಖವಾಗಿ ಕಣ್ಣೀರಿಟ್ಟನು(ಯೋಹಾನ 11:35), ಅನ್ಯಾಯವಾಗುವುದನ್ನು ಕಂಡಾಗ ಆತನಿಗೆ ಕೋಪ ಉಂಟಾಯಿತು(ಮಾರ್ಕ 3:5).

ಆತ ತನ್ನ ಮರಣವನ್ನು ಎದುರಿಸುವಾಗ ತತ್ತರಿಸಿ ದೇವರಲ್ಲಿ ಬೇಡಿಕೊಂಡನು(ಯೋಹಾನ 12:27), ಆದರೂ ವಿಧೇಯತೆಯಿಂದ ಶಿಲುಬೆಯ ಮರಣಕ್ಕೆ ತನ್ನನ್ನು ಒಪ್ಪಿಸಿಕೊಟ್ಟನು.

ಮಾನವರು ಒಳಗಾಗುವ ಎಲ್ಲಾ ಶೋಧನೆಗಳಿಗೂ ಆತ ಒಳಗಾದನು, ಆದರೆ ಪಾಪಮಾತ್ರ ಮಾಡಲಿಲ್ಲ

“ಯಾಕಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಒಳಗಾದನು, ಪಾಪ ಮಾತ್ರ ಮಾಡಲಿಲ್ಲ” (ಇಬ್ರಿಯ 4:15).

ಯೇಸು ನಮ್ಮಹಾಗೆ ಎಲ್ಲಾ ವಿಷಯಗಳಲ್ಲಿ ಶೋಧನೆಗೆ ಒಳಗಾದನು, ಆದರೆ ಆತ ಶೋಧನೆಯ ವಶವಾಗಲಿಲ್ಲ, ಬದಲಾಗಿ ಪರಿಪೂರ್ಣ ಪರಿಶುದ್ಧ ಪಾಪರಹಿತ ಜೀವಿತವನ್ನು ನಡೆಸಿದನು.

“...ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು......ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು” (ಇಬ್ರಿಯ 5:8–10).

ಯೇಸು ದೇವರ ಮಗನಾಗಿದ್ದರೂ ವಿಧೇಯನಾಗಿ ನಡೆದುಕೊಂಡು, ಪಾಪರಹಿತ ಜೀವನ ನಡೆಸಿ ತನ್ನನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿಕೊಂಡನು.

“....ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು....ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನದರೂ ಹೊಂದುವಷ್ಟು ವಿಧೇಯನಾದನು” (ಫಿಲಿಪ್ಪಿಯವರಿಗೆ 2:7–8).



## ದೇವರ ಯೋಜನೆ

ದೇವರ ಕಾರ್ಯದಲ್ಲಿ ಯೇಸುಕ್ರಿಸ್ತ ಮುಖ್ಯವಾದ ಭಾಗವಾಗಿದ್ದಾನೆ. ದೇವರ ಮನಸ್ಸಿನಲ್ಲಿ ಯೇಸುಕ್ರಿಸ್ತ ಯಾವಾಗಲೂ ಇದ್ದಾನೆ, ಆದರೆ ಯೇಸುಕ್ರಿಸ್ತ ಮರಿಯಳಲ್ಲಿ ಜನಿಸುವುದಕ್ಕಿಂತ ಮೊದಲು ಭೌತಿಕವಾಗಿ ಎಲ್ಲೂ ಇರಲಿಲ್ಲ. ಪೇತ್ರನು ಈ ವಿಷಯವಾಗಿ ಬರೆಯುತ್ತಾ;

“ಆತನು ಜಗದುತ್ಪತ್ತಿಗೆ ಮೊದಲೇ ಗೊತ್ತು ಮಾಡಲ್ಪಟ್ಟು, ಅಂತ್ಯಕಾಲದಲ್ಲಿ ನಿಮಗಾಗಿ ಪ್ರತ್ಯಕ್ಷನಾದನು” (1ಪೇತ್ರ 1:20).

ಯೇಸುಕ್ರಿಸ್ತ ದೇವರ ಭೂಯೋಜನೆಯ ಮುಖ್ಯಭಾಗವಾಗಿದ್ದಾನೆ ಎಂದು ಸತ್ಯವೇದವು ತಿಳಿಸಿಕೊಡುತ್ತದೆ. ಪ್ರಕಟನೆ ಗ್ರಂಥದಲ್ಲಿ ಯೇಸುವನ್ನು “ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿಯಾದಾತನು”(ಪ್ರಕಟನೆ 13:8) ಎಂದು ತಿಳಿಸಿದೆ. ಇದರ ಅರ್ಥ ಯೇಸು ಈ ಲೋಕದಲ್ಲಿ ಜನಿಸಿಬಂದು ತನ್ನನ್ನು ಅರ್ಪಿಸಿಕೊಳ್ಳುವ ವಿಷಯ ದೇವರ ಮನಸ್ಸಿನಲ್ಲಿ ಜಗತ್ತಿನ ಸೃಷ್ಟಿಗಿಂತಲೂ ಮೊದಲೇ ಇತ್ತು ಎಂಬುದಾಗಿದೆ. ಅದೇರೀತಿ ಯೇಸುಕ್ರಿಸ್ತನೇ ತಿಳಿಸಿರುವಂತೆ;

“ಈಗ ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು; ಲೋಕವುಂಟಾಗುದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಹಿಂದಲೇ ನನನ್ನು ಮಹಿಮೆ ಪಡಿಸು” (ಯೋಹಾನ 17:5).

ದೇವರ ಯೋಜನೆಯಲ್ಲಿ ಯೇಸುಕ್ರಿಸ್ತ ಕೇಂದ್ರೀಯ ಭಾಗವಾಗಿದ್ದಾನೆ, ಆತ ಲೋಕದ ಸೃಷ್ಟಿಗಿಂತ ಮುಂಚಿತವಾಗಿಯೇ ದೇವರ ಯೋಜನೆಯಲ್ಲಿದ್ದನೇ ಹೊರತು ಭೌತಿಕವಾಗಿ ಜೀವಿಸಿರಲಿಲ್ಲ. ಅದೇರೀತಿ ಪೌಲನು ಈ ವಿಷಯವಾಗಿ ತಿಳಿಸಿಕೊಡುತ್ತಾ,

“ದೇವರ ಕೃಪೆ ಕ್ರಿಸ್ತನ ಮೂಲಕ ಲೋಕದವರೆಲ್ಲರಿಗೂ ನೀಡುವುದು ದೇವರ ಅನಾದಿಕಾಲದ ಯೋಜನೆಯಾಗಿದೆ”(2ತಿಮೋಥೆ 1:9–10) ಎಂದು ತಿಳಿಸಿದ್ದಾನೆ.

ಅಂದರೆ ನಾವು ಅನಾದಿ ಕಾಲದಲ್ಲಿ ಭೌತಿಕವಾಗಿ ಜೀವಿಸಿರಲಿಲ್ಲ, ಆದರೆ ಕೇಲವ ದೇವರ ಮನಸ್ಸಿನಲ್ಲಿ ಮಾತ್ರವಿದ್ದೆವು.

## ಸಾರಾಂಶ :–

ಯೇಸು ಆದಿಯಿಂದಲೇ ದೇವರ ಯೋಜನೆಯಲ್ಲಿದ್ದಾನೆ, ಆದರೂ ಆತ ದೇವರ ಪವಿತ್ರಶಕ್ತಿಯಿಂದ ಕನ್ಯಾಮರಿಯಳಲ್ಲಿ ಜನಿಸುವವರೆಗೆ ಎಲ್ಲೂ ಭೌತಿಕವಾಗಿ ಇರಲಿಲ್ಲ.

ಆತ ದೇವಕುಮಾರ ಮತ್ತು ಮನುಷ್ಯ ಕುಮಾರನಾಗಿದ್ದಾನೆ.

ಆತ ತಂದೆಯಾದ ದೇವರ ಗುಣಲಕ್ಷಣಗಳನ್ನು ಹೊಂದಿದ್ದು, ನಮಗೆ ತಂದೆಯನ್ನು ತೋರಿಸಿಕೊಟ್ಟಿದ್ದಾನೆ(ತಿಳಿಸಿಕೊಟ್ಟಿದ್ದಾನೆ).

ಆತ ನಮ್ಮ ಹಾಗೆಯೇ ಮಾನವನಾಗಿದ್ದು ಎಲ್ಲಾ ರೀತಿಯ ಶೊಧನೆಗೆ ಒಳಗಾದನು, ಆದರೆ ಪಾಪ ಮಾತ್ರ ಮಾಡಲಿಲ್ಲ.

– – – – – – – – – – – – – – – – – – – –

# ಯೇಸುವಿನೊಟ್ಟಿಗೆ ದೇವರ ಸಂಬಂಧ

ಪರಿಪೂರ್ಣ ವಿಧೇಯತೆ ಮತ್ತು ನಂಬಿಕೆಯುಳ್ಳ ಒಬ್ಬನೇ ಮಗ– ತಂದೆಯ ಯೋಜನೆಯನ್ನು ಸಂಪೂರ್ಣವಾಗಿ ಪಾಲಿಸಿದವನು ಮತ್ತು ತಂದೆಯ ಪ್ರೀತಿಯನ್ನು ಲೋಕಕ್ಕೆ ಸರಿಯಾಗಿ ಹಾಗೂ ಸಂಪೂರ್ಣವಾಗಿ ಪ್ರತಿಫಲಿಸಿದವನು. ಈ ರೀತಿಯಾಗಿ ಸತ್ಯವೇದವು ದೇವರ ಒಬ್ಬನೇ ಮಗನಾದ ಯೇಸುವನ್ನು ಕುರಿತು ತಿಳಿಸುತ್ತದೆ. ದೇವರು ಮತ್ತು ಯೇಸುವಿನ ಸಂಬಂಧ ವಿಶೇಷವಾಗಿದ್ದು, ಯೇಸು ತಂದೆಯಾದ ದೇವರಿಗೆ ಸಂಪೂರ್ಣವಾಗಿ ವಿಧೇಯನಾಗಿ ಒಪ್ಪಿಸಿಕೊಂಡ ಮಗನಾಗಿದ್ದಾನೆ. ಈ ಸಂಬಂಧವು ಮಹಾ ವಿಶೇಷವಾದ ಸಂಬಂಧವಾಗಿದ್ದು ನಮಗೆ ಅನುಸರಿಸಲು ಇದು ಪರಿಪೂರ್ಣ ಮಹಾ ಮಾದರಿಯಾಗಿದೆ.

**ಅಧ್ಯಯನ ಕೇಂದ್ರಿಕೃತ ವಾಕ್ಯಗಳು :– ಮತ್ತಾಯ 3:13–17**

ಯೇಸುಕ್ರಿಸ್ತ ಮುವತ್ತು ವರ್ಷಗಳವನಾದಾಗ, ಆತ ಸುವಾರ್ತೆ ಕಾರ್ಯಕ್ಕೆ ತನ್ನ ತಂದೆಯ ಯೋಜನೆಯಂತೆ ತನ್ನನ್ನು ದೀಕ್ಷಾಸ್ನಾನದ ಮೂಲಕ ಸಮರ್ಪಿಸಿಕೊಂಡನು. ಆತ ಈ ಕಾರ್ಯದಿಂದ ಇಡೀ ಲೋಕವನ್ನೆ ಬದಲಾಯಿಸುವ ಬೋಧಕನಾದನು. ಯೇಸುಕ್ರಿಸ್ತ ನಮ್ಮ ಹಾಗೆ ಪಾಪಗಳ ಪರಿಹಾರಕ್ಕಾಗಿ ಪಶ್ಚಾತ್ತಾಪ ಪಟ್ಟು ದೀಕ್ಷಾಸ್ನಾನ ಹೊಂದಲಿಲ್ಲ, ತಂದೆಗೆ ಸಂಪೂರ್ಣ ವಿಧೇಯತೆಯನ್ನು ಪ್ರೀತಿಯನ್ನು ತೋರಿಸಲು ಮತ್ತು ದೇವರ ಯೋಜನೆಯಂತೆ ನಡೆಯಲು ಈ ಕಾರ್ಯಕ್ಕೆ ಒಳಗಾದನು. ಈ ಕಾರ್ಯದಿಂದ ದೇವರು ಯೇಸುವನ್ನು ಮೆಚ್ಚಿ–"ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ" ಎಂದು ಹೇಳಿದ್ದಾನೆ.



## ದೇವರ ಪ್ರೀತಿಯ ಪುತ್ರ

ಯೇಸುವಿನ ಜೀವಿತ ಕಾಲದಲ್ಲಿ ದೇವರು ಯೇಸುವನ್ನು ಪ್ರೀತಿಯ ಮಗನು ಎಂದು ತಿಳಿಸಿಕೊಟ್ಟಿದ್ದಾನೆ. ಯೇಸುವಿನ ಜನನ ಕಾಲದಲ್ಲಿ ಕುರುಬರಿಗೆ ಮತ್ತು ಮೂಡಣ ದೇಶದ ಪಂಡಿತರಿಗೆ ಯೇಸುವಿನ ಜನನವನ್ನು ಕುರಿತು ತಿಳಿಸಿದ್ದನೆ; ಆನಂತರ ಯೇಸು ಮಗುವಾಗಿದ್ದ ಕಾಲದಲ್ಲಿ ಆತನ ತಂದೆತಾಯಿಗಳಿಗೆ ಹೆರೋದನಿಂದ ತಪ್ಪಿಸಿಕೊಂಡು ಈಜಿಪ್ಟ್ ದೇಶಕ್ಕೆ ಹೋಗುವಂತೆ ತಿಳಿಸಿದ್ದಾನೆ(ಮತ್ತಾಯ 2:13:18).

ಮತ್ತೆ ಅವರು ಇಸ್ರಾಯೇಲ್ ದೇಶಕ್ಕೆ ಹಿಂತಿರುಗಿ ಬಂದಂತಹ ಸಂದರ್ಭದಲ್ಲಿ, ನಜರೇತಿಗೆ ಹೋಗಿ ಸುರಕ್ಷಿತನಾಗಿ ಯೇಸು ಬೆಳೆಯುವಂತೆ ಮಾಡಿದ್ದಾನೆ. ಯೇಸು ಬೆಳೆದು ದೊಡ್ಡವನಾದಂತೆಲ್ಲಾ ದೇವರಿಗೆ ವಿಧೇಯನಾಗಿ ಬೆಳೆಯುತ್ತಾ ಬಂದನು. ಆತ ದೇಹಬಲದಲ್ಲಿಯೂ, ಜ್ಞಾನದಲ್ಲಿಯೂ ತಂದೆಗೆ ಪ್ರೀತಿಪಾತ್ರನಾಗಿ ಬೆಳೆದನು. ತನ್ನ 12ನೇ ವಯಸ್ಸಿನಲ್ಲಿಯೇ ದೇವಾಲಯದಲ್ಲಿ ಧರ್ಮಶಾಸ್ತ್ರ ಗ್ರಂಥಗಳ ಬಗ್ಗೆ ಹಿರಿಯರೊಟ್ಟಿಗೆ ಚರ್ಚಿಸುತ್ತಿದ್ದನು. ಯೆರೂಸಲೇಮ್ ನನ್ನ ತಂದೆಯ ಮನೆಯಾಗಿದ್ದು, ನಾನು ತಂದೆಯ ಮನೆಯಲ್ಲಿರಬೇಕು ಎಂದು ತಿಳಿಸಿದ್ದಾನೆ. ಆತ ಬೆಳೆದಂತೆಲ್ಲಾ ತಂದೆಯ ಬಗ್ಗೆ



### ಯೇಸುಕ್ರಿಸ್ತ ತನ್ನ ಮತ್ತು ದೇವರ ಸಂಬಂಧವನ್ನು ಕುರಿತು ತಿಳಿಸಿರುವುದು

| | |
|---|---|
| ನನ್ನ ದೇವರು | : ಮತ್ತಾಯ 27:46, ಪ್ರಕಟನೆ 3:12 |
| ನನ್ನ ದೇವರು ಮತ್ತು ನಿಮ್ಮ ದೇವರು | : ಯೋಹಾನ 20:17 |
| ನನ್ನ ತಂದೆ | : ಮತ್ತಾಯ 16:17, 18:19, ಲೂಕ 2:49 |
| ತಂದೆ ಮಗನನ್ನು ಪ್ರೀತಿಸುತ್ತಾನೆ | : ಯೋಹಾನ 3:35, 5:20, 10:17 |
| ತಂದೆ ನನ್ನನ್ನು ಕಳುಹಿಸಿದ್ದಾನೆ | : ಲೂಕ 4:43, ಯೋಹಾನ 5:37, 6:57, 8:42, 10:36, 12:49, 20:21 |
| ತಂದೆಯ ಮಾಡುವುದನ್ನು ಕಂಡು ಮಗನು ಮಾಡುತ್ತಾನೆಯೇ ಹೊರತು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು | : ಯೋಹಾನ 5:19 |
| ತಂದೆಯು ನನಗಿಂತ ದೊಡ್ಡವನು | : ಯೋಹಾನ 14:28 |
| ನಾನು ತಂದೆಯಿಂದ ಜೀವಿಸುತ್ತೇನೆ | : ಯೋಹಾನ 6:57 |
| ನಾನು ನನ್ನ ತಂದೆಯೂ ಒಂದಾಗಿದ್ದೇವೆ | : ಯೋಹಾನ 10:30 |
| ತಂದೆಯು ಎಲ್ಲವನ್ನು ನನಗೆ ಒಪ್ಪಿಸಿದ್ದಾನೆ | : ಮತ್ತಾಯ 11:27 |
| ನನ್ನ ಎಡಬಲಗಡೆ ಯಾರು ಕುಳಿತುಕೊಳ್ಳಬೇಕು ಎನ್ನುವುದನ್ನು ನನ್ನ ತಂದೆ ನಿರ್ಧರಿಸುತ್ತಾನೆ | : ಮತ್ತಾಯ 20:23 |
| ನನ್ನ ಚಿತ್ತವಲ್ಲ ನಿನ್ನ ಚಿತ್ತದಂತೆಯೇ ಆಗಲಿ | : ಲೂಕ 22:42 |

ಹೆಚ್ಚುಹೆಚ್ಚು ತಿಳಿದುಕೊಳ್ಳುತ್ತಾ, ಹೆಚ್ಚುಹೆಚ್ಚು ವಿಧೇಯನ್ನು ಕಲಿತು ವಿಧೇಯನಾದನು. ಯೇಸುವಿನ ಬಾಲ್ಯದ ಬಗ್ಗೆ ನಮಗೆ ಅತಿಹೆಚ್ಚು ತಿಳಿದಿಲ್ಲ, ಆದರೆ ವಾಕ್ಯಗಳನ್ನು ನೋಡಿದಾಗ–ಯೇಸು ಜ್ಞಾನದಲ್ಲಿಯೂ, ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು; ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು(ಲೂಕ 2:41–52).

## ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು

ಯೇಸು ಜೀವಿಸಿದ್ದ ಕಾಲದಲ್ಲಿ ಆತ ಜನರಿಂದ ಅನೇಕ ತೊಂದರೆಗಳನ್ನು ಬಾಧೆಗಳನ್ನು ಅನುಭವಿಸಿದನು, ಈ ಎಲ್ಲಾ ಕಾರ್ಯಗಳಿಂದ ಆತ ತಂದೆಯ ಬಗ್ಗೆ ವಿಧೇಯತೆಯನ್ನು ಕಲಿತುಕೊಂಡನು (ಇಬ್ರಿಯ 5:8). ದೇವರ ಮುಂದೆ ತನ್ನ ಸ್ಥಾನ ಏನು ಎಂಬುದು ಯೇಸುವಿಗೆ ತಿಳಿದಿತ್ತು, ದೇವರ ಯೋಜನೆಯಂತೆ ಸೇವೆ ಸಲ್ಲಿಸುವುದೇ ತನ್ನ ಮುಖ್ಯ ಕೆಲಸವಾಗಿದೆ ಎಂಬುದು ಯೇಸುವಿಗೆ ತಿಳಿದಿತ್ತು. ಯೇಸುವೇ ಅನೇಕ ಬಾರಿ ನಾನು ತಂದೆಯಿಂದ ಸೇವೆ ಮಾಡುವುದಕ್ಕೋಸ್ಕರವೇ ಕಳುಹಿಸಲ್ಪಟ್ಟಿದ್ದೇನೆ

ಎಂದು ತಿಳಿಸಿಕೊಟ್ಟಿದ್ದಾನೆ. ಜೊತೆಗೆ 0ಯೇಸುಕ್ರಿಸ್ತ ತಂದೆ0ಯು ನನಗಿಂತ ದೊಡ್ಡವನು, ತಂದೆ0ಯ ಆಜ್ಞೆ0ಯಂತೆ ಕಾರ್ಯ ನಡೆಸುವವನಾಗಿದ್ದೇನೆ ಎಂದು ತಿಳಿಸಿಕೊಟ್ಟಿದ್ದಾನೆ.

0ಯೇಸುಕ್ರಿಸ್ತ ಪ್ರಕಾಶ ರೂಪವನ್ನು ಧರಿಸುವಾಗ ಮತ್ತು ಗೆತ್ಸೇಮನೆ ತೋಟದಲ್ಲಿ ದೇವರು 0ಯೇಸುವಿನ ಸನಿಹದಲ್ಲಿ0ಯೇ ಇದ್ದು ವಿಶೇಷ ರೀತಿ0ಯಲ್ಲಿ 0ಯೇಸುವಿನ ಕಾರ್ಯಗಳಿಗೆ ಶಕ್ತಿ0ಯನ್ನು ತುಂಬಿದನು. ಆದರೆ ಮಾನವರ ಪಾಪಗಳ ಪರಿಹಾರಕ್ಕಾಗಿ 0ಯೇಸುವು ಬಲಿ0ಯಾಗಿ ಶಿಲುಬೆ0ಯ ಮೇಲೆ ಅರ್ಪಿತವಾಗಲೇ ಬೇಕಿತ್ತು. 0ಯೇಸುವು ದೇವರ ಏಕೈಕ ಪ್ರಿ0ಯ ಕುಮಾರನಾಗಿದ್ದರೂ ಈ ಕರ್ತವ್ಯ ನಿರ್ವಹಿಸಬೇಕಿತ್ತು, ಈ ಕಾರ್ಯದ ಮೂಲಕವೇ ತನ್ನ ಜೀವಿತವನ್ನು ಕೊನೆಗಾಣಿಸಬೇಕಿತ್ತು. ಹೀಗೆ 0ಯೇಸು ತಾನು ಅನುಭವಿಸಿದ ಬಾಧೆಗಳಿಂದಲೇ ವಿಧೇ0ಯತೆ0ಯನ್ನು ಕಲಿತುಕೊಂಡನು.



## ಪ್ರಭಾವದಿಂದ ಮಹಿಮೆ0ಯ ಸ್ಥಾನಕ್ಕೆ ಏರಿಸಲ್ಪಟ್ಟನು

0ಯೇಸು ಪುನರುತ್ಥಾನ ಪಡೆದಮೇಲೆ ಪ್ರಭಾವದಿಂದ ದೇವರ ಬಲ ಪಾರ್ಶ್ವಕ್ಕೆ ಏರಿಸಲ್ಪಟ್ಟನು. ಆತ ನಿತ್ಯಜೀವ ಮತ್ತು ಅಮರತ್ವ ಹೊಂದಿದವನಾಗಿದ್ದು ಮತ್ತೆ ಮರಣ ಆತನನ್ನು ಬಾಧಿಸುವುದಿಲ್ಲ. 0ಯೇಸು ಮತ್ತೆ ಈ ಲೋಕಕ್ಕೆ ಹಿಂತಿರುಗಿ ಬಂದು ನೀತಿಯಿಂದ ಇಡೀ ಭೂಲೋಕವನ್ನು ಆಳುತ್ತಾನೆ ಎಂದು ದೇವರು ವಾಗ್ದಾನ ಮಾಡಿದ್ದಾನೆ (ಫಿಲಿಪ್ಪಿ0ಯವರಿಗೆ 2:9–11).

0ಯೇಸು ಶಿಲುಬೆ0ಯ ಮರಣವನ್ನು ಹೊಂದಿದ ಮೂರನೇ ದಿನದಲ್ಲಿ ದೇವರು ಆತನನ್ನು ಮರಣದಿಂದ ಎಬ್ಬಿಸಿ, ಲೋಕದಲ್ಲಿ ಎಲ್ಲರಿಗಿಂತ ಉನ್ನತವಾದ ಸ್ಥಾನವನ್ನು ದ0ಯಪಾಲಿಸಿದ್ದಾನೆ. 0ಯೇಸು ದೇವರಿಗೂ ಮತ್ತು ಮಾನವರಿಗೂ ಒಬ್ಬನೇ ಮಧ್ಯಸ್ಥಗಾರನಾಗಿದ್ದಾನೆ(1ತಿಮೋಥೆ 2:5), ಆತ ನಮ್ಮೆಲ್ಲರ ನಿಜ ಮಹಾ0ಯಾಜಕನಾಗಿದ್ದು ನಾವು ನಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟು ಬೇಡಿಕೊಂಡರೆ, ದೇವರಿಂದ ಪಾಪಕ್ಷಮೆ ಮತ್ತು ನಿತ್ಯಜೀವವನ್ನು ದ0ಯಪಾಲಿಸುವ ರಕ್ಷಣಾಕರ್ತ ಆಗಿದ್ದಾನೆ(ಇಬ್ರಿ0ಯರಿಗೆ 4:14–15, ಅಪೋಸ್ತಲರ ಕೃತ್ಯಗಳು 5:30–31).

## ಮತ್ತೆ ಬರುತ್ತಾನೆ :–

0ಯೇಸುಕ್ರಿಸ್ತ ಮತ್ತೆ ಬರುತ್ತಾನೆ. 0ಯೇಸುಕ್ರಿಸ್ತ ತಂದೆ0ಯು ಬಳಿಯಿಂದ(ಪರಲೋಕದಿಂದ) ಭೂಲೋಕಕ್ಕೆ ಮರಣವನ್ನು ತೆಗೆದುಹಾಕಲು, ನ್ಯಾ0ಯತೀರಿಸಲು, ಭೂಲೋಕದಲ್ಲಿ ದೇವರ ರಾಜ್ಯವನ್ನು ಸ್ಥಾಪಿಸಲು ಬರುತ್ತಾನೆ. ಸಮಸ್ತವನ್ನು ಸರಿಮಾಡಿದ ಮೇಲೆ ತನ್ನನ್ನು ದೇವರಿಗೆ ಒಪ್ಪಿಸಿಕೊಡುವನು (1ಕೊರಿಂಥ 15:24–28).



## ದೇವರು ಮತ್ತು 0ಯೇಸುಕ್ರಿಸ್ತನಿಗೆ ಇರುವ ವ್ಯತ್ಯಾಸಗಳು

ಹಲವಾರು ವ್ಯತ್ಯಾಸಗಳಿವೆ, ಕೆಲವು ಮುಖ್ಯವಾದುವುಗಳನ್ನು ನೋಡೋಣ

| | |
|---|---|
| * ದೇವರು ಶೋಧನೆಗೆ ಒಳಗಾಗುವುದಿಲ್ಲ (0ಯಾಕೋಬ 1:13). | * 0ಯೇಸು ನಮ್ಮ ರೀತಿ0ಯಲ್ಲೇ ಎಲ್ಲಾ ಶೋಧನೆಗೆ ಒಳಗಾದನು(ಇಬ್ರಿ0ಯ 4:15) |
| * ಮರಣ ಹೊಂದುವುದಿಲ್ಲ (1ತಿಮೋಥೆ 6:16). | * ಮರಣ ಹೊಂದಿದನು (1ಕೊರಿಂಥ 15:3–4). |
| * ದೇವರು ಎಲ್ಲವನ್ನು ತಿಳಿದ್ದಾನೆ (10ಯೋಹಾನ 3:20). | * ಕಲಿತು ಎಲ್ಲವನ್ನು ತಿಳಿದುಕೊಂಡನು (0ಯೋಹಾನ 15:15). |
| * ಸದಾ ಉನ್ನತಸಾದವನು (ಕೀರ್ತನೆ 92:8, ದಾನಿ0ಯೇಲ 4:34) | * ದೇವರು 0ಯೇಸುವನ್ನು ಉನ್ನತ ಸ್ಥಾನಕ್ಕೆ ಏರಿಸಿದನು (ಅಪೋಸ್ತಲರ ಕೃತ್ಯಗಳು 5:31, ಫಿಲಿಪ್ಪಿ 2:9). |

## ಸಾರಾಂಶ :–

| ತಂದೆ0ಯಾದ ದೇವರು | 0ಯೇಸುಕ್ರಿಸ್ತ |
|---|---|
| * 0ಯೇಸುವನ್ನು ಪ್ರೀತಿಸಿದನು | * ತಂದೆ0ಯಾದ ದೇವರಿಗೆ ವಿಧೇ0ಯನಾಗಿ ಪ್ರೀತಿಯಿಂದ ನಡೆದು ತಿಳಿದುಕೊಂಡನು |
| * ಆಜ್ಞೆಗಳನ್ನು 0ಯೇಸುವಿಗೆ ನೀಡಿದನು | * ತಂದೆ0ಯ ಇಚ್ಛೆ0ಯಂತೆ ನಡೆದನು |
| * 0ಯೇಸುವಿನೊಟ್ಟಿಗೆ ಎಲ್ಲ ಸಂದರ್ಭದಲ್ಲಿ ಇದ್ದನು | *ಬಾಧೆಗಳಿಂದಲೇ ವಿಧೇ0ಯತೆ0ಯನ್ನು ಕಲಿತುಕೊಂಡನು |
| * 0ಯೇಸು ವಿಧೇ0ಯನಾದ್ದರಿಂದ ನಿತ್ಯಜೀವ ಕೊಟ್ಟನು | * ತಂದೆಗೆ ವಿಧೇ0ಯರಾಗಿ ನಡೆದರೆ ಆತ ತನ್ನ ಕೃಪೆ0ಯ ಮೂಲಕ ತನ್ನ ರಾಜ್ಯ ಕೊಡುತ್ತಾನೆ ಎಂಬುದನ್ನು ತೋರಿಸಿಕೊಟ್ಟನು |

–0–0–0–0–0–0–0–0–0–